بِسْمِ اللهِ الرَّحْمٰنِ الرَّحِيْمِ　نَحْمَدُهٗ وَنُصَلِّي عَلٰى رَسُوْلِهِ الْكَرِيْمِ　وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 05

ಕನ್ನಡ ಬದರ್ ವಾರ ಪತ್ರಿಕೆ
WEEKLY BADAR QADIAN KANNADA

ಸಂಚಿಕೆ: 25

ವಾರ್ಷಿಕ ಶುಲ್ಕ ರೂ.600/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

20 ಜೂನ್ 2024, 20 ಇಹ್‌ಸಾನ್ 1403 ಹಿಜರಿ ಶಮ್ಸಿ,
13 ಝುಲ್-ಹಜ್ಜ 1445 ಹಿಜರಿ ಖಮರಿ.


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

وَاللّٰهُ يَدْعُوْٓا اِلٰى دَارِ السَّلٰمِ ؕ
وَيَهْدِيْ مَنْ يَّشَآءُ
اِلٰى صِرَاطٍ مُّسْتَقِيْمٍ ﴿۲۶﴾

**(ಸೂರಃ ಯೂನುಸ್: 26)**

**ಅಂದರೆ: ಅಲ್ಲಾಹನು ಶಾಂತಿಯ ನೆಲೆವೀಡಿಗೆ ಆಹ್ವಾನಿಸುತ್ತಾನೆ. ತಾನು ಇಚ್ಛಿಸುವವರನ್ನು ಅವನು ನೇರವಾದ ಮಾರ್ಗದೆಡೆಗೆ ನಡೆಸುತ್ತಾನೆ.**

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

### ಪವಿತ್ರ ಖುರ್‌ಆನ್ ಏಳು ವಿಧಗಳಲ್ಲಿ ಅವತೀರ್ಣಗೊಂಡಿದೆ ಅದರಿಂದ ಅನುಕೂಲವಾದುದನ್ನು ನೀವು ಪಠಿಸಿರಿ

**(2419)** ಹಝ್ರತ್ ಉಮರ್ ಬಿನ್ ಖತ್ತಾಬ್(ರ) ಅವರು ವರದಿ ಮಾಡುತ್ತಾರೆ ಅವರು ಹೇಳುತ್ತಾರೆ: ನಾನು ಹಝ್ರತ್ ಹಿಶಾಮ್ ಬಿನ್ ಹಕೀಮ್ ಬಿನ್ ಹಿಝಾಮ್(ರ) ಅವರಿಗೆ ನಾನು ಪಠಿಸುವ ವಿಧಾನಕ್ಕಿಂತ ವಿಭಿನ್ನ ರೀತಿಯಲ್ಲಿ ಸೂರಾ ಫುರ್ಖಾನ್ ಅನ್ನು ಪಠಿಸುವುದನ್ನು ಆಲಿಸಿದೆ. ಮತ್ತು ಅದನ್ನು (ಸೂರಾ) ಹಝ್ರತ್ ಪೈಗಂಬರ್(ಸ) ರವರು ನನಗೆ ಪಠಿಸಿದ್ದರು. ಮತ್ತು ನಾನು ಅವರ ಮೇಲೆ ದಾಳಿ ಮಾಡಬಹುದಿತ್ತು, ಆದರೆ ನಾನು ಅವರಿಗೆ ನಮಾಝನ್ನು ಸಂಪೂರ್ಣವಾಗಿ ನಿರ್ವಹಿಸುವ ತನಕ ಬಿಡುವು ನೀಡಿದೆ. ತದನಂತರ, ನಾನು ಅವರು ಧರಿಸಿದ್ದ ಮೇಲಂಗಿಯನ್ನು ಹಿಡಿದು ಎಳೆದು ಹಝ್ರತ್ ಪೈಗಂಬರ್(ಸ) ಅವರ ಕರೆತಂದು ಹೇಳಿದೆ: ನಾನು (ಸೂರತ್ ಅಲ್-ಫುರ್ಕಾನ್) ಅನ್ನು ನೀವು(ಸ) ನನಗೆ ಕಲಿಸಿದ ವಿಧಾನಕ್ಕೆ ವಿರುದ್ಧವಾಗಿ ಅದನ್ನು ಬೇರೆ ರೀತಿಯಲ್ಲಿ ಪಠಿಸುವುದನ್ನು ನಾನು ಕೇಳಿದ್ದೇನೆ. ಅದಕ್ಕೆ ಹಝ್ರತ್ ಪೈಗಂಬರ್(ಸ) ರವರು ನನಗೆ ಉದ್ದೇಶಿಸಿ ಹೇಳಿದರು: ಅವರನ್ನು ಬಿಟ್ಟುಬಿಡಿ. ನಂತರ ಅವರು(ಸ) ಅವರಿಗೆ ಹೇಳಿದರು: ಓದಿ. ಅದಕ್ಕೆ ಅವನು ಓದಿದನು. ಅವರು(ಸ) ಹೇಳಿದರು: ಅದೇ ರೀತಿ ಅವತೀರ್ಣಗೊಂಡಿದೆ. (ಆಗ ಅವರು ಹೇಳಿದರು:) ಪವಿತ್ರ ಖುರ್‌ಆನ್ ಏಳು ವಿಧಗಳಲ್ಲಿ ಅವತೀರ್ಣಗೊಂಡಿದೆ. ನಿಮಗೆ ಯಾವುದು ಸುಲಭವೋ ಹಾಗೆಯೇ ಪಠಿಸಿರಿ. **(ಸ಼ಹೀಹ್ ಬುಖಾರಿ, ಸಂಪುಟ-4, ಕಿತಾಬ್ ಅಲ್-ಖುಸುಮತ್, 2008 ಖಾದಿಯಾನ್ ಪ್ರಕಟಿತ)**


**MUSLIM TELEVISION AHMADIYYA INTERNATIONAL**
**www.mta.tv**


ನರಕದಲ್ಲಿ ಒಬ್ಬ ವ್ಯಕ್ತಿಯೂ ಉಳಿಯದ ಮತ್ತು ತಂಗಾಳಿಯು ಅದರ ಬಾಗಿಲು ತಟ್ಟುವ ಸಮಯ ಬರುತ್ತದೆ ಎಂದು ಹದೀಸ್‌ನಲ್ಲಿ ಉಲ್ಲೇಖಿಸಲಾಗಿದೆ.

### ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

ಇಸ್ಲಾಂ ಧರ್ಮವು ಖಡ್ಗದ ಬಲದಿಂದ ಹರಡಿದೆ ಎಂದು ಹೇಳುವವರ ಮಾತು ಸಂಪೂರ್ಣವಾಗಿ ತಪ್ಪಾಗಿದೆ. ಇಸ್ಲಾಂ ಧರ್ಮವು ಅದರ ಎದುರಾಳಿಯು ಖಡ್ಗ ಎತ್ತಿದ ಮೇಲೆಯೇ ರಕ್ಷಣಾತ್ಮಕವಾಗಿ ಖಡ್ಗವನ್ನು ಎತ್ತಿಕೊಂಡಿದೆ. ಇಸ್ಲಾಂ ಧರ್ಮದ ಮೇಲೆ ದಾಳಿ ಮಾಡಲು ಶತ್ರುಗಳು ಯಾವ ರೀತಿಯ ಆಯುಧಗಳನ್ನು ಬಳಸುತ್ತಾರೊ ಅದೇ ರೀತಿಯ ಆಯುಧಗಳನ್ನು ಬಳಸಬೇಕೆಂದು ಪವಿತ್ರ ಖುರ್‌ಆನ್‌ನಲ್ಲಿ ಸ್ಪಷ್ಟವಾಗಿ ಬರೆಯಲಾಗಿದೆ. ಮಹದಿಯ ಬಗ್ಗೆ ಹೇಳಲಾಗುತ್ತದೆ, ಅವರು ಬಂದು ಖಡ್ಗವನ್ನು ಬಳಸುವರು ಎಂಬುದು ಸರಿಯಲ್ಲ. ಈಗ ಎಳೆಯಬೇಕಾದ ಖಡ್ಗ ಎಲ್ಲಿದೆ? ಅದರ ಮೇಲೆ ಇನ್ನು ವಿಷಾದದ ಸಂಗತಿ ಎಂದರೆ ಮಸೀಹರು ಈ ಜನರ ಮಾತುಗಳನ್ನು ಒಪ್ಪುವರು ಮತ್ತು ದೇವದೂತರುಗಳೊಂದಿಗೆ ಆಕಾಶದಿಂದ ಅವತರಿಸುವರು, ಆದರೂ ಅವರ ಮೇಲೆ ಅಪನಂಬಿಕೆ (ಕಾಫಿರ್) ಎಂಬ ಫತ್ವಾವನ್ನು ನೀಡಲಾಗುತ್ತದೆ, ಉದಾಹರಣೆಗೆ, ಗ್ರಂಥಗಳಿಂದ ಸಾಬೀತಾಗಿದೆ. ಒಬ್ಬ ವ್ಯಕ್ತಿ ಎದ್ದು ನಿಂತು ಹೇಳುವನು **ಇನ್ನ ಹಾಝಾ ರಜುಲ ಗೈಯ್ಯರ ದೀನನಾ-** ಅಂದರೆ: ಈ ವ್ಯಕ್ತಿಯು ನಮ್ಮ ಧರ್ಮವನ್ನು ಬದಲಾಯಿಸಿದ್ದಾನೆ. ನಮ್ಮ ಜಮಾಅತ್ತಿನ ಸದಸ್ಯರು ಈ ಎಲ್ಲಾ ವಿಷಯಗಳನ್ನು ಅರಿತುಕೊಳ್ಳಬೇಕೆಂದು ನಾವು ಬಯಸುತ್ತೇವೆ, ಹೀಗೆ ಅವರು ಯಾವುದೇ ಸಭೆಗಳಲ್ಲಿ ಮುಜುಗರಕ್ಕೊಳಗಾಗಬೇಕಾಗಿಲ್ಲ.

ಒಬ್ಬ ವ್ಯಕ್ತಿಯು ಸ್ವಲ್ಪ ಸಮಯದವರೆಗೆ ನರಕದಲ್ಲಿ ಇರುತ್ತಾನೆ, ನಂತರ ಅವನು ಹೊರಬರುತ್ತಾನೆ ಎಂದು ನಮ್ಮ ವಿಶ್ವಾಸವಿದೆ. ಅಂದರೆ ಯಾರ ಸುಧಾರಣೆಯು ಪ್ರವಾದಿತ್ವದಿಂದ ಆಗಲಿಲ್ಲವೊ ಅವರ ಸುಧಾರಣೆ ನರಕದ ಶಿಕ್ಷೆಯಿಂದ ಆಗುವುದು. ನರಕದಲ್ಲಿ ಒಬ್ಬ ವ್ಯಕ್ತಿಯೂ ಉಳಿಯದ ಮತ್ತು ತಂಗಾಳಿಯು ಅದರ ಬಾಗಿಲು ತಟ್ಟುವ ಸಮಯ ಬರುತ್ತದೆ ಎಂದು ಹದೀಸ್‌ನಲ್ಲಿ ಉಲ್ಲೇಖಿಸಲಾಗಿದೆ.

ಇದಲ್ಲದೆ, ಪವಿತ್ರ ಖುರ್‌ಆನ್ ಸ್ವರ್ಗದ ಅನುಗ್ರಹಗಳನ್ನು ಉಲ್ಲೇಖಿಸಿದೆ **ಅತಾಅನ್ ಗೈರ ಮಜ್‌ಝೂಝಿನ್** ಎಂದು ಹೇಳಿದೆ ಅದು ಸರಿಯು ಆಗಿದೆ ಏಕೆಂದರೆ ಹಾಗೆ ಆಗದಿರುತ್ತಿದ್ದರೆ ಭರವಸೆ ಮೂಡುತ್ತಿರಲಿಲ್ಲ ಮತ್ತು ನಿರಾಶೆ ಉದ್ಭವಿಸುತ್ತಿತ್ತು. ಸ್ವರ್ಗದ ಅಪರಿಮಿತ ಅನುಗ್ರಹಗಳನ್ನು ಕಂಡು ಸಂತೋಷವು ಹೆಚ್ಚಾಗುತ್ತದೆ ಮತ್ತು ನರಕದ ಅಸ್ತಿತ್ವವು ಒಂದು ನಿರ್ದಿಷ್ಟ ಅವಧಿಗೆ ಇರುವುದನ್ನು ಕಂಡು ಸರ್ವಶಕ್ತನಾದ ಅಲ್ಲಾಹನ ಉದಾರತೆಯ ಮೇಲೆ ಭರವಸೆಯನ್ನು ಮೂಡುತ್ತದೆ.

**(ಮಲ್‌ಫೂಝಾತ್, ಸಂಪುಟ-2, ಪುಟ-14, 2018 ಖಾದಿಯಾನ್)**

ಬೆಳಗಿನ ನಮಾಝ್ ಸರ್ವಶಕ್ತನಾದ ಅಲ್ಲಾಹನ ಮುಂದೆ ಪ್ರತ್ಯೇಕವಾಗಿ ಪ್ರಸ್ತುತಪಡಿಸಲಾಗುತ್ತದೆ
ಮತ್ತು ಇದು ವಿಶೇಷವಾಗಿ ಜನಪ್ರಿಯವಾಗಿರುತ್ತದೆ ಏಕೆಂದರೆ ಈ ಸಮಯದಲ್ಲಿ ಒಬ್ಬ ವ್ಯಕ್ತಿಯು ಸಿಹಿಯದ ನಿದ್ರೆಯಿಂದ ಎಚ್ಚರಗೊಳ್ಳುತ್ತಾನೆ
ನಿಸ್ಸಂದೇಹವಾಗಿ, ಬೆಳಗಿನ ನಮಾಝನ್ನು ಮಾಡುವ ವ್ಯಕ್ತಿಯು ಆ ನಮಾಝನ್ನು ನಿಷ್ಠೆಯಿಂದ ನಿರ್ವಹಿಸಿದರೆ, ಉಳಿದ ನಮಾಝ್‌ಗಳು ಸಹ ಅವನಿಗೆ ಸುಲಭವಾಗುತ್ತವೆ.

ಸಯ್ಯಿದುನಾ ಹಝ್ರತ್ ಮುಸ್ಲೆಹ್ ಮೌಊದ್(ರ) ಸೂರಾ ಬನೀ ಇಸ್ರಾಈಲ್‌ನ ಆಯತ್ 79 **ಅಖಿಮಿಸ್ಸಲತ ಲಿದುಲೂಕಿಶ್ಶನ್‌ಸಿ ಇಲಾ ಘಸಖಿಲ್ಲೈಲಿ ವ ಖುರ್‌ಆನಲ್ ಫಜ್ರ್; ಇನ್ನ ಖುರ್‌ಆನಲ್ ಫಜ್ರಿ ಕನ ಮಶ್‌ಹೂದ** ಅಂದರೆ: ಸೂರ್ಯ ಇಳಿಮುಖವಾಗುವ ಸಮಯ ಮೊದಲ್ಗೊಂಡು ರಾತ್ರಿ ಕತ್ತಲೆಯಾವರಿಸುವ ವರೆಗೆ (ನಿರ್ದಿಷ್ಟ ಸಮಯಗಳಲ್ಲಿ) ನಮಾಝನ್ನು ನಿಷ್ಠೆಯಿಂದ ನಿರ್ವಹಿಸಿರಿ. ಹಾಗೆಯೇ ಪ್ರಭಾತ ಕಾಲದ ಖುರ್‌ಆನ್ ಪಾರಾಯಣವನ್ನೂ (ನಿಷ್ಠೆಯಿಂದ) ಮಾಡಿರಿ. ಖಂಡಿತವಾಗಿಯೂ ಪ್ರಭಾತಕಾಲದ ಖುರ್‌ಆನ್ ಪಾರಾಯಣ (ಅಲ್ಲಾಹನ ಸನ್ನಿಧಿಯಲ್ಲಿ ವಿಶೇಷವಾಗಿ) ಸ್ವೀಕರಿಸಲ್ಪಡುತ್ತದೆ.

*(ಪುಟ ಸಂಖೆ 07 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

ಹಝ್ರತ್ ಝ್ಯೆದ್(ರ) ಮತ್ತು ಖುಬೈಬ್(ರ) ಇಬ್ಬರೂ ಒಂದೇ ದಿನದಲ್ಲಿ ಹುತಾತ್ಮರಾದರು. ಅವರಿಬ್ಬರೂ ಹುತಾತ್ಮರಾದ ದಿನ, ಹಝ್ರತ್ ಪೈಗಂಬರ್(ಸ) ಅವರಿಗೆ ಇದರ ಬಗ್ಗೆ ತಿಳಿಸಿದಾಗ ಅವರು(ಸ) ಹೇಳಿದರು: **ವ ಅಲೈಕುಮಾ ಅಸ್ಸಲಾಮ್** ನಿಮ್ಮಿಬ್ಬರ ಮೇಲೆ ಶಾಂತಿ ಇರಲಿ.

---

ಹಝ್ರತ್ ಆಸಿಮ್ ಬಿನ್ ಸಾಬಿತ್(ರ) ಅಲ್ಲಾಹನಲ್ಲಿ ಪ್ರಾರ್ಥಿಸಿದರು. **ಅಲ್ಲಾಹುಮ್ಮ ಅಖ್ಬಿರ್ ಅನ್ನಾ ನಬಿಯ್ಯಕ**– ಓ ನನ್ನ ಪ್ರಭೂ!! ನಮ್ಮ ಪರಿಸ್ಥಿತಿಯ ಬಗ್ಗೆ ನಿಮ್ಮ ಪ್ರವಾದಿ(ಸ) ಅವರಿಗೆ ತಿಳಿಸು.

---

ಅಝ್ಲ್ ಮತ್ತು ಖಾರಾದ ಈ ವಿಶ್ವಾಸಘಾತಕ ಜನರು ಉಸ್‌ಫಾನ್ ಮತ್ತು ಮಕ್ಕಾದ ನಡುವೆ ತಲುಪಿದಾಗ ಅವರು ಬನೂಲಹ್ಯಾನ್ ಅವರಿಗೆ ಮುಸ್ಲಿಮರು ನಮ್ಮೊಂದಿಗೆ ಬರುತ್ತಿದ್ದಾರೆ, ನೀವು ಬನ್ನಿ ಎಂದು ರಹಸ್ಯ ಸಂದೇಶವನ್ನು ಕಳುಹಿಸಿದರು. ತದನಂತರ ಬನುಲಹ್ಯಾನ್ ಗೋತ್ರದ ಇನ್ನೂರು ಯುವಕರು, ಅವರಲ್ಲಿ ನೂರು ಬಿಲ್ಲುಗಾರರು, ಮುಸ್ಲಿಮರನ್ನು ಹಿಂಬಾಲಿಸಲು ಹೊರಟರು ಮತ್ತು ರಜೀಅ್‌ಯ ಸ್ಥಳದಲ್ಲಿ ಅವರನ್ನು ಒತ್ತಿದರು.

---

ಹಝ್ರತ್ ಝ್ಯೆದ್(ರ) ಅವರ ಉತ್ತರವನ್ನು ಆಲಿಸಿ ಅಬುಸುಫ್‌ಯಾನ್ ಹೇಳಿದನು: ಮುಹಮ್ಮದ್‌ರ (ಸಲ್ಲಲ್ಲಾಹು ಅಲೈಹಿ ವಸಲ್ಲಮ್) ಸಹಾಬಿಯರು ಮುಹಮ್ಮದ್‌ರನ್ನು ಪ್ರೀತಿಸುವ ಹಾಗೆ ಜನರಲ್ಲಿ ಯಾರಾದರೂ ಯಾರನ್ನಾದರೂ ಪ್ರೀತಿಸುವುದಾಗಿ ನಾನು ಕಂಡಿಲ್ಲ.

**ಸರಿಯ ಹಝ್ರತ್ ಅಬೂಸಲಮ(ರ), ಸರಿಯ ಅಬ್ದುಲ್ಲಾ ಬಿನ್ ಉನೈಸ್(ರ) ಮತ್ತು ಸರಿಯಾ ರಜೀಅ್‌ಯ ಬೆಳಕಿನಲ್ಲಿ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರ ಪರಿಶುದ್ಧ ಜೀವನಚರಿತ್ರೆಯ ವಿಶ್ವಾಸ ವರ್ಧಕ ಪ್ರಸ್ತಾವನೆ**

ಹಾರಿಸ್‌ನ ಪುತ್ರಿ ಹೇಳುತ್ತಾಳೆ: ಅಲ್ಲಾಹನ ಆಣೆ! ಖುಬೈಬ್(ರ)ಗಿಂತ ಉತ್ತಮವಾದ ಕೈದಿಯನ್ನು ನಾನು ಎಂದಿಗೂ ನೋಡಿಲ್ಲ. ದ್ರಾಕ್ಷೆಯ ಒಂದು ಗೊಂಚಲು ಅವರ ಕೈಯಲ್ಲಿ ಇರುವುದಾಗಿಯೂ ಅವರು ಅದರಿಂದ ತಿನ್ನುವುದಾಗಿಯೂ ನಾನು ಒಮ್ಮೆ ನೋಡಿದ್ದೆ. ಅವರನ್ನು ಸರಪಳಿಯಿಂದ ಕಟ್ಟಲಾಗಿತ್ತು. ಆ ದಿನಗಳಲ್ಲಿ ಮಕ್ಕದಲ್ಲಿ ಯಾವುದೇ ಹಣ್ಣು ಇದ್ದಿರಲಿಲ್ಲ. ಅದು ಅಲ್ಲಾಹನು ಹಝ್ರತ್ ಖುಬೈಬ್(ರ)ರಿಗೆ ನೀಡಿದ ಆಹಾರವಾಗಿತ್ತು.

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಇಸ್ಲಾಮಾಬಾದ್ (ಯು.ಕೆ) ಯ **'ಮಸ್ಜಿದ್ ಮುಬಾರಕ್'** ನಿಂದ **17–05–2024** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ ۔ بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعَالَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

اِيَّاكَ نَعْبُدُ وَاِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಸರಿಯ ರಜೀಅ್‌ನ ಪ್ರಸ್ತಾಪ ನಡೆಯುತ್ತಿತ್ತು. ಹದೀಸುಗಳಲ್ಲಿ ಮತ್ತು ಚರಿತ್ರೆಯಲ್ಲಿ ಇದರ ಬಗ್ಗೆ ಇನ್ನಷ್ಟು ವಿವರಣೆ ಇದೆ. ಸಹೀಹ್ ಬುಖ಼ಾರಿಯಲ್ಲಿ ರಜೀಅ್‌ನ ಕುರಿತು ಹೀಗೆ ಬರೆಯಲಾಗಿದೆ: ಹಝ್ರತ್ ಪೈಗಂಬರ್(ಸ) ಹತ್ತು ವ್ಯಕ್ತಿಗಳ ಒಂದು ತಂಡವನ್ನು ಸ್ಥಿತಿಗತಿಗಳ ಬಗ್ಗೆ ಅರಿಯಲು ಕಳುಹಿಸಿದರು ಮತ್ತು ಹಝ್ರತ್ ಆಸಿಮ್ ಬಿನ್ ಸಾಬಿತ್ ಅನ್ಸಾರಿ(ರ)ರನ್ನು ಅಮೀರ್ ಆಗಿ ನೇಮಿಸಿದರು. ಬನೂ ಲಹ್‌ಯಾನ್ ಎಂಬ ಎದುರಾಳಿ ಗೋತ್ರದ ಇನ್ನೂರು ಬಿಲ್ಲುಗಾರರೊಂದಿಗೆ ಈ ಮುಸ್ಲಿಮರ ಮುಖಾಮುಖಿಯಾಯಿತು. ಅವರನ್ನು ನೋಡಿ ಮುಸ್ಲಿಮರು ಒಂದು ಗುಡ್ಡೆಯಲ್ಲಿ ಅಭಯ ಪಡೆದರು. ಮುಸ್ಲಿಮರಿಗೆ ಅಭಯ ನೀಡುವುದಾಗಿಯೂ ಅವರನ್ನು ವಧಿಸದೇ ಇರುವುದಾಗಿಯೂ ಎದುರಾಳಿಗಳು ಮಾತು ಕೊಟ್ಟರು. ಸರಿಯದ ಅಮೀರ್ ಆದ ಹಝ್ರತ್ ಆಸಿಮ್ ಬಿನ್ ಸಾಬಿತ್ ಅನ್ಸಾರಿ(ರ) ಹೀಗೆ ಹೇಳಿದರು: ನನ್ನ ಬಗ್ಗೆ ಹೇಳುವುದಾದರೆ, ನಾನು ಅವಿಶ್ವಾಸಿಗಳ ಅಭಯದಲ್ಲಿ ನಿಲ್ಲುವುದಿಲ್ಲ. ಅನಂತರ ಎಲ್ಲರೂ ಹೀಗೆ ದುಆ ಮಾಡಿದರು: ಹೇ ಅಲ್ಲಾಹ್, ನಮ್ಮ ಸ್ಥಿತಿಯ ಬಗ್ಗೆ ನಬಿ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ತಿಳಿಸಿಕೊಡು.

ಸತ್ಯನಿಷೇಧಿಗಳು ಅವರ ಮೇಲೆ ಬಾಣಗಳನ್ನು ಚಲಾಯಿಸಿದರು. ಹಝ್ರತ್ ಆಸಿಮ್(ರ) ಸಮೇತ ಏಳು ಸಹಾಬಿಯರು ಶಹೀದ್ ಆದರು. ಅಭಯ ಪಡೆಯಲು ಅವರಲ್ಲಿ ಮೂವರು ಗುಡ್ಡೆಯಿಂದ ಕೆಳಗೆ ಇಳಿದರು. ಅವರಲ್ಲಿ ಖುಬೈಬ್ ಅನ್ಸಾರಿ(ರ), ಇಬ್ನೆ ದಸಿನ(ರ) ಮತ್ತು ಅಬ್ದುಲ್ಲಾ ಬಿನ್ ತಾರಿಖ್(ರ) ಎಂಬವರಿದ್ದರು. ಎದುರಾಳಿಗಳು ಆ ಮೂವರನ್ನು ಹಿಡಿದು ಹಗ್ಗದಿಂದ ಕಟ್ಟಿದರು. ಈ ಮೂವರು ಸಹಾಬಿಯರಲ್ಲಿ ಒಬ್ಬರಾದ ಹಝ್ರತ್ ಅಬ್ದುಲ್ಲಾಹ್ ಬಿನ್ ತಾರಿಖ್(ರ) ಹೇಳಿದರು: ಇದು ನೀವು ಮಾಡಿದ ವಾಗ್ದಾನದ ಮೊದಲ ಉಲ್ಲಂಘನೆಯಾಗಿದೆ. ಅಲ್ಲಾಹನಾಣೆ, ನಾನು ನಿಮ್ಮೊಂದಿಗೆ ಬರಲಾರೆನು. ಆಗ ಸತ್ಯನಿಷೇಧಿಗಳು ಮೊದಲು ಅವರನ್ನು ಒತ್ತಾಯಪಡಿಸಿದರು. ಅವರು ಒಪ್ಪದೇ ಇದ್ದಾಗ ಅವರನ್ನು ಅಲ್ಲೇ ಶಹೀದ್ ಮಾಡಿದರು. ಉಳಿದ ಇಬ್ಬರು ಸಹಾಬಿಯರಾದ ಹಝ್ರತ್ ಖುಬೈಬ್(ರ) ಮತ್ತು ಹಝ್ರತ್ ಇಬ್ನೆ ದಸಿನ(ರ)ರನ್ನು ಸತ್ಯನಿಷೇಧಿಗಳು ಕೊಂಡುಹೋಗಿ ಮಕ್ಕದಲ್ಲಿ ಮಾರಾಟ ಮಾಡಿದರು. ಹಝ್ರತ್ ಖುಬೈಬ್(ರ)ರನ್ನು ಬನೂ ಹಾರಿಸ್ ಬಿನ್ ಆಮಿರ್ ಬಿನ್ ನೌಫಲ್ ಬಿನ್ ಅಬ್ದು ಮನಾಫ್ ಖರೀದಿ ಮಾಡಿದನು. ಮತ್ತು ಹಾರಿಸ್ ಬಿನ್ ಆಮಿರ್ ನನ್ನು ಬದರ್ ಯುದ್ಧದಲ್ಲಿ ವಧಿಸಿದವರು ಹಝ್ರತ್ ಖುಬೈಬ್(ರ) ಆಗಿದ್ದರು. ಹಝ್ರತ್ ಖುಬೈಬ್(ರ) ಅವನ ಬಳಿ ಖೈದಿಯಾದರು. ಇದು ಬುಖಾರಿಯ ವರದಿಯಾಗಿದೆ. . (ಸಹೀಹ್ ಬುಖಾರಿ, ಕಿತಾಬುಲಲ್ ಜಿಹಾದ್ ವಸ್ಸೈರ್, ಹದೀಸ್–3045)

ಬುಖ಼ಾರಿಯ ವರದಿ ಪ್ರಕಾರ ಹತ್ತು ಸಹಾಬಿಯರ ಈ ತಂಡ ಬೇಹುಗಾರಿಕೆಗಾಗಿಯೇ ರಹಸ್ಯವಾಗಿ ಹೋಗುತ್ತಿತ್ತು. ಅವರು ನೆಲಕ್ಕೆ ಎಸೆದ ಖರ್ಜೂರದ ಬೀಜಗಳನ್ನು ಗುರುತಿಸಿ ಮದೀನದ ಮುಸ್ಲಿಮರು ಬಂದಿರುವುದಾಗಿ ತಿಳಿದ ಒಬ್ಬ ಮಹಿಳೆ ಬೊಬ್ಬೆ ಹಾಕಿದಾಗ ಶತ್ರುಗಳು ಮುಸ್ಲಿಮರ ಮೇಲೆ ದಾಳಿ ನಡೆಸಿದರು. ಅಷ್ಟರಲ್ಲಿ ಇಸ್ಲಾಮಿನ ಬಗ್ಗೆ ತಿಳಿಸಿಕೊಡಲು ಕೆಲವು ವ್ಯಕ್ತಿಗಳನ್ನು ಕಳುಹಿಸಿಕೊಡಬೇಕೆಂದು ಮನವಿ ಮಾಡುತ್ತಾ ಅಝ್ಲ್ ಮತ್ತು ಖಾರ ಗೋತ್ರಗಳಿಂದ ಕೆಲವು ಜನರು ಹಝ್ರತ್ ಪೈಗಂಬರ್(ಸ)ರ ಬಳಿಗೆ ಬಂದಿದ್ದರು. ಹೀಗೆ ಬಂದಿದ್ದ ಸಂಘದ ಜೊತೆಗೆ ಹಝ್ರತ್ ಪೈಗಂಬರ್(ಸ) ಮುಸ್ಲಿಮರ ಈ ತಂಡವನ್ನು ಕಳುಹಿಸಿದರು.

ಈ ಕುರಿತು ಹಝ್ರತ್ ಮುಸ್ಲಿಹ್ ಮೌಊದ್(ರ) ಮತ್ತು ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಸಹ ಚರಿತ್ರೆಯ ಅನೇಕ ಗ್ರಂಥಗಳಿಂದ ಗ್ರಹಿಸಿ ಹೀಗೆ ಹೇಳಿರುವರು: ಮುಸ್ಲಿಮರು ರಹಸ್ಯವಾಗಿ ಯಾತ್ರೆ ಮಾಡಿದ್ದಾಗಿ ಬುಖ಼ಾರಿ ಅಥವಾ ಕೆಲವು ಚರಿತ್ರೆಯ ಗ್ರಂಥಗಳಲ್ಲಿ ಇರುವ ಪ್ರಸ್ತಾಪವು ವರದಿಗಾರರ ಮರೆವಿನಿಂದ ಉಂಟಾದ ಪ್ರಮಾದವೆಂದು ತೋರುತ್ತದೆ. ಏಕೆಂದರೆ ಆ ತಂಡಕ್ಕೆ ರಹಸ್ಯವಾಗಿ ಹೋಗುವ ಅಗತ್ಯವಿರಲಿಲ್ಲ. ಏಕೆಂದರೆ ಆ ತಂಡ ಅಝ್ಲ್ ಮತ್ತು ಖಾರದ ಜನರ ಜೊತೆಗೆ ಹೋಗುತ್ತಿತ್ತು.

ಆದರೆ ಶತ್ರುಗಳ ಒಳಸಂಚಿನ ಪ್ರಕಾರ ಅಝ್ಲ್ ಮತ್ತು ಖಾರದ ವ್ಯಕ್ತಿಗಳು ಮುಸ್ಲಿಮರ ಜೊತೆಗೆ ಉಸ್‌ಫಾನ್ ಮತ್ತು ಮಕ್ಕಾದ ಮಾರ್ಗ ಮಧ್ಯೆ ತಲುಪಿದಾಗ ಅವರು ವಾಗ್ದಾನದ ಉಲ್ಲಂಘನೆ ಮಾಡುತ್ತಾ ಮತ್ತು ಮೊದಲೇ ತೀರ್ಮಾನಿಸಲಾದ ಯೋಜನೆಯ ಪ್ರಕಾರ ಬನೂ ಲಹ್‌ಯಾನ್ ಗೋತ್ರಕ್ಕೆ ಮುಸ್ಲಿಮರ ಆಗಮನದ ಸುದ್ದಿ ಮುಟ್ಟಿಸಿರಬಹುದು. ಹೀಗೆ ಅವರು ಇನ್ನೂರು ದಾಳಿಗಾರರ ಜೊತೆಗೆ ಅಲ್ಲಿಗೆ ತಲುಪಿದರು. ವಲ್ಲಾಹು ಅಲ್‌ಲಮ್.

ಆದಾಗ್ಯೂ, ನೂರು ಪರಿಣಿತ ಬಿಲ್ಲುಗಾರರನ್ನು ಒಳಗೊಂಡಂತೆ ಬನೂಲಹ್ಯಾನ್‌ನ ಇನ್ನೂರು ಜನರು ಸಹಾಬೀಯರನ್ನು ಆಕ್ರಮಣ ಮಾಡಿದರು ಮತ್ತು ಸುತ್ತುವರೆದರು. ಸೇನೆಯ ಅಮೀರ್ ಹಝ್ರತ್ ಆಸಿಮ್(ರ) ಮತ್ತು ಅವರ ಸಹಾಬೀಯರು ಈ ಜನರ ಬಗ್ಗೆ ತಿಳಿದಾಗ, ಅವರು ಫದ್ ಫದ್ ಎಂಬ ಪರ್ವತವನ್ನು ಏರಿದರು. ಒಂದು ವರದಿಯಲ್ಲಿ, ಆ ಪರ್ವತದ ಹೆಸರು ಖರ್ದಾದ್ ಎಂದಾಗಿದೆ. ಮುಶ್ರಿಕೀನರು ಸಹಾಬೀಯರನ್ನು ಸುತ್ತುವರೆದು ಹೇಳಿದರು, "ನೀವು ನಮ್ಮ ಬಳಿಗೆ ಕೆಳಗೆ ಇಳಿದು ಬಂದರೆ, ನಾವು ಯಾರನ್ನೂ ವಧಿಸುವುದಿಲ್ಲ ಎಂದು ನಿಮಗೆ ಪ್ರತಿಜ್ಞೆ ಮಾಡುತ್ತೇವೆ. ಅಲ್ಲಾಹನ ಆಣೆ! ಖಂಡಿತವಾಗಿಯೂ ನಿಮ್ಮನ್ನು ವಧಿಸುವ ಉದ್ದೇಶ ನಮಗಿಲ್ಲ. ನಿಮ್ಮ ಸಲುವಾಗಿ ನಾವು ಮಕ್ಕಾದ ಜನರಿಂದ ಏನನ್ನಾದರೂ ಪಡೆಯುವ ಉದ್ದೇಶವನ್ನು ಮಾತ್ರ ಹೊಂದಿದ್ದೇವೆ. (ಸಬ್ಲುಲ್ ಹುದಾ ವರ್‍ರಶ್ಶಾದ್, ಸಂಪುಟ–6, ಪುಟ–40, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್, ಲೆಬನಾನ್)

ಇದನ್ನು ಕೇಳಿ ಈ ಬಗ್ಗೆ ಹಝ್ರತ್ ಆಸಿಮ್(ರ) ಹೇಳಿದರು: ಅಲ್ಲಾಹನ ಆಣೆ! ನಾನು ಅವಿಶ್ವಾಸಿಗಳ ಅಭಯದಲ್ಲಿ ನಿಲ್ಲುವುದಿಲ್ಲ. ನಾನು ನನ್ನ ಜೀವಮಾನವಿಡೀ ಯಾವ ಅವಿಶ್ವಾಸಿಯ ಆಶ್ರಯವನ್ನೂ ಸ್ವೀಕರಿಸುವುದಿಲ್ಲ ಎಂದು ಪ್ರತಿಜ್ಞೆ ಮಾಡಿದ್ದೇನೆ. ಅವರ ಇತರ ಇಬ್ಬರು ಸಹಚರರ ಉತ್ತರವು ಒಂದೇ ಆಗಿತ್ತು, ನಾವು ಅವಿಶ್ವಾಸಿಗಳ ಆಶ್ರಯವನ್ನು ಎಂದಿಗೂ ಒಪ್ಪಿಕೊಳ್ಳುವುದಿಲ್ಲ. ಈ ಸಂದರ್ಭದಲ್ಲಿ ಹಝ್ರತ್ ಆಸಿಮ್ ಬಿನ್ ಸಾಬಿತ್(ರ) ಅಲ್ಲಾಹನಲ್ಲಿ ಪ್ರಾರ್ಥಿಸಿದರು. **ಅಲ್ಲಾಹುಮ್ಮ ಅಖ್ಬಿರ್ ಅನ್ನಾ ನಬಿಯ್ಯಕ–** ಓ ನನ್ನ ಪ್ರಭೂ!! ನಮ್ಮ ಪರಿಸ್ಥಿತಿಯ ಬಗ್ಗೆ ನಿಮ್ಮ ಪ್ರವಾದಿ(ಸ) ಅವರಿಗೆ ತಿಳಿಸು. ಆದಾಗ್ಯೂ, ತದನಂತರ ಇಬ್ಬರ ನಡುವೆ ನಿತ್ಯ ಯುದ್ಧ ಶುರುವಾಯಿತು. (ಸೀರತ್ ಎನ್ಸೈಕ್ಲೋಪೀಡಿಯಾ, ಸಂಪುಟ–6, ಪುಟ–453, ದಾರುಸ್ಸಲಾಮ್ ರಿಯಾದ್, 1434 ಹಿಜರಿ)

ಸೈನ್ಯದ ಅಮೀರ್ ಹಝ್ರತ್ ಆಸಿಮ್(ರ) ತನ್ನ ಧೈರ್ಯ ಮತ್ತು ಶೌರ್ಯದ ಸಾರವನ್ನು ತೋರಿಸುತ್ತಿದ್ದರು ಮತ್ತು ಅದೇ ಸಮಯದಲ್ಲಿ ಹೀಗೆ ಕವನದ ಪಂಕ್ತಿಗಳನ್ನು ಹೇಳುತ್ತಿದ್ದರು ಅದರ ಅನುವಾದ ಹೀಗಿದೆ: "ನಾನು ಯಾವ ಕಾರಣಕ್ಕಾಗಿ ಶರಣಾಗಬೇಕು? ನಾನು ಧೈರ್ಯಶಾಲಿ ಮತ್ತು ನುರಿತ ಬಿಲ್ಲುಗಾರನಾಗಿದ್ದರೂ ಮತ್ತು ನನ್ನ ಬಿಲ್ಲಿಗೆ ಬಲವಾದ ತಂತಿಯನ್ನು ಜೋಡಿಸಲ್ಪಟ್ಟಿದೆ. ಈ ಬಿಲ್ಲಿನ ಬದಿಯಿಂದ, ಉದ್ದವಾದ, ಚೂಪಾದ ಬಾಣಗಳು ವೇಗವಾಗಿ ಹಾರುತ್ತವೆ. ಸಾವು ನಿಜವಾಗಿದೆ ಮತ್ತು ಜೀವನಕ್ಕೆ ವಾಸ್ತವವಿಲ್ಲ. ಅಲ್ಲಾಹನು ಏನನ್ನು ನಿರ್ಧರಿಸಿದ್ದಾನೋ ಅದನ್ನು ಅವನು ಮನುಷ್ಯನಿಗೆ ಬಹಿರಂಗಪಡಿಸುತ್ತಾನೆ. ಮನುಷ್ಯ ಅಲ್ಲಾಹನ ಬಳಿಗೆ ಹಿಂತಿರುಗಬೇಕು. ನಾನು ನಿಮ್ಮೊಂದಿಗೆ ಯುದ್ಧವಾಡದಿದ್ದರೆ, ನನ್ನ ತಾಯಿ ನನ್ನನ್ನು ಕಳೆದುಕೊಂಡಂತೆ ಕಾಣುತ್ತಾಳೆ. ಇದು ಆ ಕವಿತೆಗಳ ಅನುವಾದವಾಗಿದೆ. ಹಝ್ರತ್ ಪೈಗಂಬರ್(ಸ)ರವರ ಎಲ್ಲಾ ಸಹಾಬೀಯರು ಅತ್ಯಂತ ಶೌರ್ಯ ಮತ್ತು ಧೈರ್ಯದಿಂದ ಶತ್ರುಗಳ ಮುಂದೆ ನಿಂತು ಹೋರಾಡಿದರು.

ಅವರು ಮೊದಲು ಬಿಲ್ಲುಗಾರಿಕೆಯ ಮೂಲಕ ಶತ್ರುಗಳೊಂದಿಗೆ ಹೋರಾಡಿದರು. ಬಾಣಗಳು ಮುಗಿದುಹೋದಾಗ ಈಟಿಯಿಂದ ಶತ್ರುಗಳ ಮೇಲೆ ದಾಳಿ ನಡೆಸಿದರು. ಈಟಿ ಕೂಡ ತುಂಡಾಗಿ ಕೇವಲ ಖಡ್ಗ ಬಾಕಿ ಉಳಿದಾಗ ಖಡ್ಗದೊಂದಿಗೆ ಶತ್ರುಗಳನ್ನು ಎದುರಿಸಿದರು. ತಾನು ಶಹೀದ್ ಆಗುವುದೆಂದು ಅವರಿಗೆ ಖಚಿತವಾದಾಗ ಅವರು ತನ್ನ ಮೃತದೇಹದ ಗೌರವದ ಬಗ್ಗೆ ಚಿಂತಿತರಾದರು. ಏಕೆಂದರೆ ಸತ್ಯನಿಷೇಧಿಗಳು ಯಾರನ್ನಾದರೂ ಶಹೀದ್ ಮಾಡಿದರೆ ಅವರ ಮೃತದೇಹವನ್ನು ತುಳಿಯುತ್ತಿದ್ದರು ಮತ್ತು ನಗ್ನಗೊಳಿಸುತ್ತಿದ್ದರು. ಅವರು ಅಲ್ಲಾಹನಲ್ಲಿ ಹೀಗೆ ದುಆ ಮಾಡಿದರು:

**ಅಲ್ಲಾಹುಮ್ಮ ಹಮೈತು ದೀನಕ ಅವ್ವಲ ನಹಾರಿ ಫಾಹ್‌ಮಿಲೀ ಲಹ್ಮೀ ಆಖಿರಹೂ–** ಅಂದರೆ: ಹೇ ಅಲ್ಲಾಹ್, ನಾನು ದಿನದ ಮೊದಲ ಭಾಗದಲ್ಲಿ ನಿನ್ನ ಧರ್ಮದ ಸಂರಕ್ಷಣೆ ಮಾಡಿದ್ದೇನೆ. ಆದ್ದರಿಂದ ದಿನದ ಉಳಿದ ಭಾಗದಲ್ಲಿ ನೀನು ನನ್ನ ಮಾನದ ಸಂರಕ್ಷಣೆ ಮಾಡು. ಹೀಗೆ ದುಆ ಮಾಡಿ ಅವರು ಯುದ್ಧದಲ್ಲಿ ನಿರತರಾದರು. ಖಡ್ಗದೊಂದಿಗೆ ಇಬ್ಬರನ್ನು ಗಾಯಗೊಳಿಸಿ ಒಬ್ಬನ್ನು ವಧಿಸಿದರು. ಅನಂತರ ಅವರು ಶಹೀದ್ ಆದರು. ಹೀಗೆ ಅವರು ಉಳಿದ ಆರು ಶಹೀದರೊಂದಿಗೆ ಸೇರೆ ಶಹೀದ್ ಪದವಿಯನ್ನು ಗಳಿಸಿದರು. (ದಾಎರಾ ಮಆರಿಫ್ ಸೀರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್, ಸಂಪುಟ–7, ಪುಟ–140, ಬಝ್ಮ್ ಇಖ್ಬಾಲ್ ಲಾಹೋರ್)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಈ ಘಟನೆಯ ಪ್ರಸ್ತಾಪ ಮಾಡುತ್ತಾ ಬರೆಯುತ್ತಾರೆ: "ಸಫರ್, 4 ಹಿಜ್ರಿಯಲ್ಲಿ ಹಝ್ರತ್ ಪೈಗಂಬರ್(ಸ) ಅವರು ತಮ್ಮ ಹತ್ತು ಸಹಚರರ ತಂಡವನ್ನು ಸಿದ್ಧಪಡಿಸಿ ಆಸಿಮ್ ಬಿನ್ ಸಾಬಿತ್(ರ) ಅವರನ್ನು ಅಮೀರ್ ಆಗಿ ನೇಮಿಸಿದರು ಮತ್ತು ಅವರಿಗೆ ರಹಸ್ಯವಾಗಿ ಮಕ್ಕಾದ ಹತ್ತಿರ ಹೋಗಿ ಖುರೈಷಿಗಳ ಸ್ಥಿತಿಗತಿಗಳನ್ನು ತಿಳಿದುಕೊಳ್ಳಿ ಮತ್ತು ಅವರ ಕಾರ್ಯಗಳು ಮತ್ತು ಉದ್ದೇಶಗಳನ್ನು ನಿಮಗೆ(ಸ) ವರದಿ ಮಾಡಿ ಎಂದು ಆದೇಶಿಸಿದರು. ಆದರೆ ಅವರ ಈ ತಂಡವು ಹೊರಟಿರಲಿಲ್ಲ ಅಷ್ಟರಲ್ಲಿ ಅಝ್ಲ್ ಮತ್ತು ಖಾರಾ ಗೋತ್ರದ ಕೆಲವರು ಹಝ್ರತ್ ಪೈಗಂಬರ್(ಸ)ರ ಸನ್ನಿಧಿಗೆ ಬಂದು ಹೀಗೆ ಹೇಳಿದರು: ನಮ್ಮ ಗೋತ್ರದ ಅನೇಕ ಜನರು ಇಸ್ಲಾಂ ಧರ್ಮದತ್ತ ಒಲವು ಹೊಂದಿದ್ದಾರೆ. ಆದ ಕಾರಣ ನೀವು(ಸ) ನಿಮ್ಮ ಕೆಲವು ಜನರನ್ನು ನಮ್ಮನ್ನು ಮುಸ್ಲಿಮರನ್ನಾಗಿ ಮಾಡುವ ಮತ್ತು ನಮಗೆ ಇಸ್ಲಾಂ ಧರ್ಮವನ್ನು ಕಲಿಸುವುದಕ್ಕೆ ದಯವಿಟ್ಟು ನಮ್ಮೊಂದಿಗೆ ಕಳುಹಿಸಿ. ಹಝ್ರತ್ ಪೈಗಂಬರ್(ಸ) ಅವರು ಅವರ ಆಶಯವನ್ನು ತಿಳಿದು ಸಂತೋಷಪಟ್ಟರು ಮತ್ತು ಸುದ್ದಿಗಾಗಿ ಸಿದ್ಧಪಡಿಸಿದ ಅದೇ ತಂಡವನ್ನು ಅವರೊಂದಿಗೆ ಕಳುಹಿಸಿದರು. ಆದರೆ ವಾಸ್ತವವಾಗಿ, ಇದು ನಂತರ ಘಟನೆಯಿಂದ ತಿಳಿದು ಬಂದಿದ್ದೇನೆಂದರೆ ಈ ಜನರು ಸುಳ್ಳುಗಾರರು ಮತ್ತು ತಮ್ಮ ಮುಖ್ಯಸ್ಥ ಸುಫ್ಯಾನ್ ಬಿನ್ ಖಾಲಿದ್‌ನ ಹತ್ಯೆಗೆ ಸೇಡು ತೀರಿಸಿಕೊಳ್ಳಲು ಯೋಜಿಸಿದ್ದ ಕುತಂತ್ರವಾಗಿತ್ತು ಅಂದರೆ ಈ ನೆಪದಿಂದ ಮುಸ್ಲಿಮರು ಮದೀನಾದಿಂದ ಹೊರಬಂದಾಗ ಅವರ ಮೇಲೆ ಹಲ್ಲೆ ಮಾಡಬಹುದು ಎಂದು ಯೋಜನೆ ರೂಪಿಸಿದರು ಮತ್ತು ಬನೂಲಹ್ಯಾನ್‌ನವರು ಈ ಸೇವೆಗೆ ಅಝ್ಲ್ ಮತ್ತು ಖಾರಾದ ಜನರಿಗೆ ಬಹಳಷ್ಟು ಒಂಟೆಗಳನ್ನು ಉಡುಗೋರೆಯಾಗಿ ನೀಡಲಾಗುವುದು ಎಂದು ಭರವಸೆ ನೀಡಿದ್ದರು. ಅಝ್ಲ್ ಮತ್ತು ಖಾರಾದ ಈ ವಿಶ್ವಾಸಘಾತಕ ಜನರು ಉಸ್‌ಫಾನ್ ಮತ್ತು ಮಕ್ಕಾದ ನಡುವೆ ತಲುಪಿದಾಗ ಅವರು ಬನೂಲಹ್ಯಾನ್ ಅವರಿಗೆ ಮುಸ್ಲಿಮರು ನಮ್ಮೊಂದಿಗೆ ಬರುತ್ತಿದ್ದಾರೆ, ನೀವು ಬನ್ನಿ ಎಂದು ರಹಸ್ಯ ಸಂದೇಶವನ್ನು ಕಳುಹಿಸಿದರು. ತದನಂತರ ಬನುಲಹ್ಯಾನ್ ಗೋತ್ರದ ಇನ್ನೂರು ಯುವಕರು, ಅವರಲ್ಲಿ ನೂರು ಬಿಲ್ಲುಗಾರರು, ಮುಸ್ಲಿಮರನ್ನು ಹಿಂಬಾಲಿಸಲು ಹೊರಟರು ಮತ್ತು ರಜೀಅ್ ಎಂಬ ಸ್ಥಳದಲ್ಲಿ ಅವರನ್ನು ಒತ್ತಿದರು.

ಹತ್ತು ಜನರು ಇನ್ನೂರು ಸೈನಿಕರೊಂದಿಗೆ ಹೇಗೆ ಹೋರಾಡಲು ಸಾಧ್ಯ? ಆದರೆ ಮುಸ್ಲಿಮರಿಗೆ ಶರಣಾಗಲು ಬೋಧಿಸಿರಲಿಲ್ಲ. ಕೂಡಲೇ ಈ ಸಹಾಬಿಯು ಹತ್ತಿರದ ಗುಡ್ಡವನ್ನು ಹತ್ತಿ ಹೋರಾಟಕ್ಕೆ ಸಿದ್ಧರಾದರು. ಅವಿಶ್ವಾಸಿಗಳಿಗೆ ಮೋಸ ಮಾಡುವುದು ಕೆಟ್ಟ ಕಾರ್ಯವಾಗಿರಲಿಲ್ಲ ಅವರು ಅವರಿಗೆ ನೀವು ಪರ್ವತದಿಂದ ಕೆಳಗೆ ಇಳಿದು ಬನ್ನಿ ನಾವು ನಿಮ್ಮನ್ನು ರಕ್ಷಣೆ ನೀಡುತ್ತೇವೆ ನಿಮ್ಮನ್ನು ವಧಿಸುವುದಿಲ್ಲ ಎಂದು ಕರೆದು ಭರವಸೆ ನೀಡಿದರು. ಅದಕ್ಕೆ ಆಸಿಮ್(ರ) ಹೀಗೆ ಉತ್ತರಿಸಿದರು: "ನಮಗೆ ನಿಮ್ಮ ವಾಗ್ದಾನದ ಮೇಲೆ ಭರವಸೆ ಇಲ್ಲ, ನಾವು ನಿಮ್ಮ ಈ ಭರವಸೆಯ ಮೇಲೆ ಕೆಳಗೆ ಇಳಿದು ಬರುವುದಿಲ್ಲ." ತದನಂತರ ಅವರು ಆಕಾಶದ ಕಡೆ ನೋಡಿ ಹೀಗೆ ದುಆ ಮಾಡಿದರು: ಓ ನನ್ನ ಪ್ರಭು! ನಿನಗೆ ನಮ್ಮ ಪರಿಸ್ಥಿತಿಯ ಬಗ್ಗೆ ಅರಿವಿದೆ. ನಮ್ಮ ಪರಿಸ್ಥಿತಿಯ ಬಗ್ಗೆ ನಿನ್ನ ಪ್ರವಾದಿ ಹಝ್ರತ್ ಪೈಗಂಬರ್(ಸ) ಅವರಿಗೆ ತಿಳಿಸು." ಹೀಗೆ ಆಸಿಮ್ ಮತ್ತು ಅವರ ಸಂಗಡಿಗರು ಅವರ ವಿರುದ್ಧ ಹೋರಾಡಿದರು. ಅಂತಿಮವಾಗಿ ಅವರು ಹೋರಾಡುತ್ತಲೇ ಶಹೀದ್ ಆದರು.

ಹಝ್ರತ್ ಆಸಿಮ್ ಬಿನ್ ಸಾಬಿತ್(ರ) ಅವರ ಮೃತದೇಹದ ದೈವಿಕ ರಕ್ಷಣೆ ಹೇಗಾಯಿತು? ನನ್ನ ಮೃತ ದೇಹವನ್ನು ಅಲ್ಲಾಹನು ಕಾಪಾಡು ಎಂದು ಅವರು ಮೊದಲು ಪ್ರಾರ್ಥಿಸಿದ್ದರು. ಈ ನಿಟ್ಟಿನಲ್ಲಿ, ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಬರೆಯುತ್ತಾರೆ: "ರಜೀಅ್ ಘಟನೆಯ ಬಗ್ಗೆ ಒಂದು ವರದಿ ಹೀಗಿದೆ: ಮಕ್ಕಾದ ಖುರೈಷಿಗಳು ಬನೂಲಹ್ಯಾನ್‌ರ ಕೈಯಲ್ಲಿ ರಜೀಅ್‌ಯಲ್ಲಿ ಶಹೀದ್ ಆದ ಜನರಲ್ಲಿ ಆಸಿಮ್ ಬಿನ್ ಸಾಬಿತ್(ರ) ಕೂಡ ಇದ್ದರು ಎಂಬ ಮಾಹಿತಿ ಪಡೆದಾಗ, ಆಸಿಮ್ ಬಿನ್ ಸಾಬಿತ್(ರ) ಬದ್ರ್ ಸಂದರ್ಭದಲ್ಲಿ ಒಬ್ಬ ದೊಡ್ಡ ಮುಶ್ರಿಕ್ ಖುರೈಷಿಯರ ಸರದಾರನನ್ನು ವಧಿಸಿದ್ದರು. ಶಹೀದ್ ಆದವರಲ್ಲಿ ಆಸಿಮ್ ಬಿನ್ ಸಾಬಿತ್(ರ) ಸಹ ಇರುವರು ಎಂದು ಮಕ್ಕಾದ ಖುರೈಶಿಗಳಿಗೆ ಗೊತ್ತಾದಾಗ ಹಝ್ರತ್ ಆಸಿಮ್(ರ)ರ ತಲೆ ಅಥವಾ ದೇಹದ ಯಾವುದಾದರೂ ಭಾಗವನ್ನು ತರಲು ಅವರು ಕೆಲವು ಜನರನ್ನು ಕಳುಹಿಸಿದರು. ಇನ್ನೊಂದು ವರದಿಯ ಪ್ರಕಾರ: ಯಾವ ಸರದಾರನನ್ನು

ಹರ್ಝ್‌ರತ್ ಆಸಿಮ್(ರ) ವಧಿಸಿದ್ದರೋ ಆತನ ತಾಯಿ ಸಲಾಫ ಬಿನ್ತ್ ಸಾಅದ್ ಹೀಗೆ ಪಣತೊಟ್ಟಿದ್ದಳು: 'ನಾನು ನನ್ನ ಪುತ್ರನ ಕೊಲೆಗಾರನ ತಲೆಬುರುಡೆಯಲ್ಲಿ ಶರಾಬು ಸುರಿದು ಕುಡಿಯುವೆ.' ಮತ್ತು ಅವರ ತಲೆಬುರುಡೆ ಯಾರು ತರುತ್ತಾರೆ ಅವರಿಗೆ ನೂರು ಒಂಟೆಗಳು ಬುಮಾನವಾಗಿ ನೀಡಲಾಗುವುದು ಎಂದು ಪ್ರತಿಜ್ಞೆ ಮಾಡಿದ್ದಳು. ಸೇಡು ಮತ್ತು ಕೋಪದ ಬೆಂಕಿ ಇಷ್ಟರ ಮಟ್ಟಿಗೆ ಏರಿತ್ತು. "ಆದರೆ ಸರ್ವಶಕ್ತನಾದ ಅಲ್ಲಾಹನು ಮಾಡಿದ್ದು ಏನೆಂದರೆ, ಆ ಜನರು ಹರ್ಝ್‌ರತ್ ಆಸಿಮ್(ರ)ರ ಮೃತದೇಹದ ಸಮೀಪಕ್ಕೆ ತಲುಪಿದಾಗ, ಅವರ ಮೃತದೇಹದ ಮೇಲೆ ಜೇನುನೊಣಗಳು ಮತ್ತು ಕಣಜಗಳು ಬಂದು ಗುಂಪುಗೂಡಿದ್ದುವು. ಶತ್ರುಗಳು ಜೇನುನೊಣಗಳನ್ನೂ ಕಣಜಗಳನ್ನೂ ದೂರ ಮಾಡಲು ಬಹಳ ಪ್ರಯತ್ನ ಮಾಡಿದರು. ಆದರೆ ಅವುಗಳು ಅಲ್ಲಿಂದ ಹೋಗಲಿಲ್ಲ. ಕೊನೆಗೆ ಆ ಜನರು ಸೋತು ಅಲ್ಲಿಂದ ಹೊರಟು ಹೋದರು. ಅನಂತರ ಕೂಡಲೇ ಮಳೆ ಮತ್ತು ತೀವ್ರ ಬಿರುಗಾಳಿ ಬಂತು ಹಾಗೂ ಆಸಿಮ್(ರ)ರ ಮೃತದೇಹ ಅಲ್ಲಿಂದ ಎಲ್ಲಿಗೋ ಹರಿದುಕೊಂಡು ಹೋಯಿತು. ಹರ್ಝ್‌ರತ್ ಆಸಿಮ್(ರ) ಮುಸ್ಲಿಮರಾದಾಗ ಅವರು ಹೀಗೆ ಪ್ರತಿಜ್ಞೆ ಮಾಡಿದ್ದರು: ಇನ್ನು ಮುಂದೆ ಬಹುದೇವಾರಾಧಕರ ಎಲ್ಲ ಸಂಪ್ರದಾಯಗಳಿಂದ ನಾನು ಬಿಟ್ಟು ನಿಲ್ಲುವೆನು ಮತ್ತು ಎಂದಿಗೂ ಯಾವನೇ ಸತ್ಯನಿಷೇಧಿಯನ್ನು ಸ್ಪರ್ಶಿಸಲಾರೆನು. ಹರ್ಝ್‌ರತ್ ಉಮರ್(ರ)ರಿಗೆ ಆಸಿಮ್(ರ) ಶಹೀದ್ ಆದ ಬಗ್ಗೆ ಮತ್ತು ಈ ಎಲ್ಲ ಘಟನೆಗಳ ಬಗ್ಗೆ ಗೊತ್ತಾದಾಗ ಅವರು ಹೀಗೆ ಹೇಳಿದರು: ಅಲ್ಲಾಹನು ತನ್ನ ದಾಸನ ಪ್ರತಿಜ್ಞೆಗೆ ಎಷ್ಟು ಬೆಲೆ ಕೊಡುತ್ತಾನೆ ಎಂದು ನೋಡಿರಿ. ಯಾವನೇ ಸತ್ಯನಿಷೇಧಿಯನ್ನು ಮುಟ್ಟಲಾರೆನು ಎಂದು ಆಸಿಮ್ ಪ್ರತಿಜ್ಞೆ ಮಾಡಿದ್ದರು. ಅವರ ಮರಣದ ನಂತರವೂ ಅಲ್ಲಾಹನು ಅವರ ಪ್ರತಿಜ್ಞೆಗೆ ಬೆಲೆ ಕೊಟ್ಟನು. ಸತ್ಯನಿಷೇಧಿಗಳಿಗೆ ಅವರನ್ನು ಸ್ಪರ್ಶಿಸಲು ಸಾಧ್ಯವಾಗಲಿಲ್ಲ. (ಸೀರತ್ ಖಾತಮನ್ನಬೀಯೀನ್(ಸ), ಹರ್ಝ್‌ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ(ರ), ಪುಟ-516) (ಅತ್ತಬಖಾತುಲ್ ಕುಬ್ರ, ಸಂಪುಟ-3, ಪುಟ-352, ದಾರುಲ್ ಕುತುಬ್ ಇಲ್ಮಿಯಾ ಬೈರುತ್ 1990) (ಅಲ್‌ಮವಾಹಿಬ್ ಲಿದ್ದುನಿಯಾ, ಸಮುಘಟ-1, ಪುಟ-424, ಅಲ್‌ಮಕ್ತಬ್ ಅಲ್‌ಇಸ್ಲಾಮಿ ಬೈರುತ್ 2004)

ಹರ್ಝ್‌ರತ್ ಆಸಿಮ್(ರ) ಅನ್ನು ಹಮಿ-ಅಲ್-ದಬ್ರ್ ಎಂದೂ ಕರೆಯುತ್ತಾರೆ, ಅಂದರೆ ಕುರಿ ಅಥವಾ ಜೇನುನೊಣಗಳಿಂದ ರಕ್ಷಿಸಲ್ಪಟ್ಟವನು. ಸರ್ವಶಕ್ತನಾದ ಅಲ್ಲಾಹನು ಅವರನ್ನು ಸಾವಿನ ನಂತರ ಕುರಿಗಳ ಮೂಲಕ ರಕ್ಷಿಸಿದನು. ನಂತರ ಹರ್ಝ್‌ರತ್ ಮುಅತ್ತಿಬ್ ಬಿನ್ ಉಬೈದ(ರ) ಮತ್ತು ಇತರ ಹಿಂಸಾಚಾರಕ್ಕೆ ಒಳಗಾದವರ ಶಹಾದತ್‌ನ ಉಲ್ಲೇಖಿಸಲಾಗಿದೆ. ಹರ್ಝ್‌ರತ್ ಮುಅತ್ತಿಬ್ ಬಿನ್ ಉಬೈದ(ರ) ಅವರು ಯುದ್ಧದ ಸಂದರ್ಭದಲ್ಲಿ ಗಂಭೀರವಾಗಿ ಗಾಯಗೊಂಡರು. ಶತ್ರುಗಳು ಅವರ ಬಳಿ ತಲುಪಿ ಅವರನ್ನು ಶಹೀದ್ ಮಾಡಿದರು. ಇವರಲ್ಲದೆ ಇತರ ಐವರು ಸಹಾಬೀಯರು ಕೂಡ ವೀರಾವೇಶದಿಂದ ಹೋರಾಡುತ್ತಿರುವಾಗ ಶತ್ರುಗಳ ಬಾಣಗಳಿಗೆ ಬಲಿಯಾದರು. ಈ ಮೂಲಕ ಒಟ್ಟು ಏಳು ಮಂದಿ ಸಹಾಬೀಯರು ಹುತಾತ್ಮರಾದರು. ಈಗ ಕೇವಲ ಮೂವರು ಸಹಾಬೀಯರು ಉಳಿದಿದ್ದರು: ಹರ್ಝ್‌ರತ್ ಖುಬೈಬ್ ಬಿನ್ ಅದಿ(ರ), ಹರ್ಝ್‌ರತ್ ಝೈದ್ ಬಿನ್ ದಸಿನಾ(ರ) ಮತ್ತು ಹರ್ಝ್‌ರತ್ ಅಬ್ದುಲ್ಲಾ ಬಿನ್ ತಾರಿಖ್(ರ).

(ಅಲ್-ಅಸಾಬಾ, ಸಂಪುಟ-3, ಪುಟ-461, ದಾರುಲ್ ಕುತುಬ್ ಇಲ್ಮಿಯಾ ಬೈರುತ್ 1995) (ಸೀರತ್ ಎನ್ಸೈಕ್ಲೋಪೀಡಿಯಾ, ಸಂಪುಟ-6, ಪುಟ-454, ದಾರುಸ್ಸಲಾಮ್ ರಿಯಾದ್, 1434 ಹಿಜರಿ)

ಆ ಮೂವರನ್ನೂ ಏನೂ ಮಾಡುವುದಿಲ್ಲವೆಂದು ಶತ್ರುಗಳು ಮೊದಲು ವಾಗ್ದಾನ ಮಾಡಿದ್ದರು. ಆದ್ದರಿಂದ ಆ ಸಹಾಬೀಯರು ಪರ್ವತದದಿಂದ ಇಳಿದು ಬಂದರು. ವಿರೋಧಿಗಳು ಈ ಸಹಾಬೀಯರನ್ನು ಹಿಡಿದುಕೊಳ್ಳುವಲ್ಲಿ ಯಶಸ್ವಿಯಾದಾಗ ಅವರು (ವಿರೋಧಿಗಳು) ತಮ್ಮ ಬಿಲ್ಲುಗಳ ತಂತಿಗಳನ್ನು ಬಿಚ್ಚಿ ಅವರಿಗೆ (ಸಹಾಬೀಯರಿಗೆ) ಕಟ್ಟುಹಾಕಿದರು. ಈ ಕುರಿತು ಹರ್ಝ್‌ರತ್ ಅಬ್ದುಲ್ಲಾ ಬಿನ್ ತಾರಿಖ್(ರ) ಹೇಳಿದರು: ಇದು ಮೊದಲ ಉಲ್ಲಂಘನೆಯಾಗಿದೆ. ಅಲ್ಲಾಹನ ಆಣೆ!! ನಾನು ನಿಮ್ಮೊಂದಿಗೆ ಹೋಗುವುದಿಲ್ಲ. ನಾನು ಈ ಹುತಾತ್ಮರ ಉದಾಹರಣೆಯನ್ನು ಇಷ್ಟಪಡುತ್ತೇನೆ. ವಿರೋಧಿಗಳು ಅವರನ್ನು ಬಲವಂತವಾಗಿ ಎಳೆಯಲು ಬಯಸಿದರು ಮತ್ತು ಅವರನ್ನು ಜೊತೆಯಲ್ಲಿ ಹೋಗಲು ಪ್ರಯತ್ನಿಸಿದರು, ಆದರೆ ಅಬ್ದುಲ್ಲಾ ಬಿನ್ ತಾರಿಖ್(ರ) ಹಾಗೆ ಮಾಡಲಿಲ್ಲ, ಆದ್ದರಿಂದ ಅವರು ಅಬ್ದುಲ್ಲಾ(ರ) ಅವರನ್ನೂ ಹುತಾತ್ಮಗೊಳಿಸಿದರು. (ಸಬ್ಲುಲ್ ಹುದಾ ವರ್‍ರಶ್ಶಾದ್, ಸಂಪುಟ-6, ಪುಟ-41, ದಾರುಲ್ ಕುತುಬ್ ಇಲ್ಮಿಯಾ ಬೈರುತ್ ಲೆಬನಾನ್)

ಕೆಲವು ವರದಿಗಳ ಪ್ರಕಾರ, ಈ ಮೂವರು ಸಹಾಬೀಯರನ್ನು ಬಂಧಿಗಳಾಗಿ ತೆಗೆದುಕೊಂಡ ನಂತರ ಸತ್ಯವಿಶ್ವಾಸಿಗಳು ಮಕ್ಕಾದ ಕಡೆಗೆ ಸಾಗುತ್ತಿದ್ದರು. ಅವರು ಅವರನ್ನು ಮಕ್ಕಾದ ಜನರಿಗೆ ಮಾರಾಟ ಮಾಡಲು ಬಯಸಿದ್ದರು. ಈ ತಂಡವು ಮಕ್ಕಾದಿಂದ ಇಪ್ಪತ್ತೆರಡು ಕಿಲೋಮೀಟರ್ ದೂರದಲ್ಲಿರುವ ಮರ್‍ರುಝ್ಝಹ್‌ರಾನ್ ಸ್ಥಳವನ್ನು ತಲುಪಿದಾಗ, ಹರ್ಝ್‌ರತ್ ಅಬ್ದುಲ್ಲಾ ಬಿನ್ ತಾರಿಖ್(ರ) ತಮ್ಮ ಕೈಗಳನ್ನು ತೆರೆದು ತಮ್ಮ ಕತ್ತಿಯನ್ನು ಹಿಡಿದು ಯುದ್ಧಕ್ಕೆ ತಮ್ಮನ್ನು ತಾವು ತೊಡಗಿಸಿಕೊಂಡರು. ಅಂತಹ ಜಿಹಾದ್‌ನ ಮನೋಭಾವವನ್ನು ಕಂಡ ಶತ್ರುಗಳು ತಕ್ಷಣವೇ ಹಿಮ್ಮೆಟ್ಟಿದರು ಮತ್ತು ಕಲ್ಲು ತೂರಾಟ ಆರಂಭಿಸಿದರು, ಹೀಗೆ ಹರ್ಝ್‌ರತ್ ಅಬ್ದುಲ್ಲಾ ಬಿನ್ ತಾರಿಖ್(ರ) ಅವರನ್ನು ಸಹ ಶಹೀದ್ ಮಾಡಿದರು. ಅವರ ಖಬರ್ ಮರ್‍ರಜ್ಜುಹರ್‌ನಲ್ಲಿದೆ. (ದಾಎರಾ ಮುಆರಿಫ್ ಸೀರತ್ ಮುಹಮ್ಮದ್ ರಸೂಲುಲ್ಲಾಹ್(ಸ), ಸಂಪುಟ-7, ಪುಟ-141, ಬರ್ಝ್ಮ್ ಇಖ್ಬಾಲ್ ಲಾಹೋರ್ 2022)

ಈ ಬಗ್ಗೆ ಹರ್ಝ್‌ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಬರೆದಿದ್ದಾರೆ: "ಏಳು ಸಹಾಬೀಯರು ಕೊಲ್ಲಲ್ಪಟ್ಟಾಗ ಮತ್ತು ಖುಬೈಬ್ ಬಿನ್ ಆದಿ(ರ), ಝೈದ್ ಬಿನ್ ದಸಿನಾ(ರ) ಮತ್ತು ಇನ್ನೊಬ್ಬ ಸಹಚರರು ಮಾತ್ರ ಉಳಿದಾಗ, ಈ ಜನರನ್ನು ಜೀವಂತವಾಗಿ ಸೆರೆಹಿಡಿಯುವುದು ಅವರ ಮುಖ್ಯ ಆಸೆಯಾಗಿದ್ದ ಅವಿಶ್ವಾಸಿಗಳು, ನಂತರ ತಮ್ಮ ಧ್ವನಿ ಎತ್ತಿ ಅವರನ್ನು ಕೆಳಗೆ ಇಳಿದು ಬರಲು ಹೇಳಿದರು, ಅಂದರೆ ನಾವು ನಿಮಗೆ ಯಾವುದೇ ರೀತಿಯ ತೊಂದರೆ ನೀಡುವುದಿಲ್ಲ ಎಂದು ವಾಗ್ದಾನ ಮಾಡುತ್ತೇವೆ ಎಂದು ಹೇಳಿದರು. ಈಗ ಪರಿಶುದ್ಧ ಮನಸ್ಸುಳ್ಳ ಮುಸ್ಲಿಮರು ಅವರ ಕುತಂತ್ರಕ್ಕೆ ಒಳಗಾಗಿ ಪರ್ವತದಿಂದ ಕೆಳಗೆ ಇಳಿದು ಬಂದರು, ಆದರೆ ಅವರು ಕೆಳಗಿಳಿದ ತಕ್ಷಣ ಅವಿಶ್ವಾಸಿಗಳು ಅವರನ್ನು ತಮ್ಮ ಬಿಲ್ಲು ಮತ್ತು ಬಾಣಗಳ ತಲೆಗೆ ಕಟ್ಟಿದರು. ಈ ಸಂದರ್ಭದಲ್ಲಿ, ಖುಬೈಬ್ ಮತ್ತು ಝೈದ್‌ರ ಸಂಗಡಿಗ ಅಬ್ದುಲ್ಲಾ ಬಿನ್ ತಾರಿಖ್(ರ) ಎಂದು ಇತಿಹಾಸದಲ್ಲಿ ಉಲ್ಲೇಖಿಸಲಾಗಿದೆ ಅವರು ಅದನ್ನು ಸಹಿಸಲಾರದೆ ಅವರಿಗೆ ಕೂಗಿ ಇದು ನಿಮ್ಮ ವಾಗ್ದಾನದ ಮೊದಲ ಉಲ್ಲಂಘನೆಯಾಗಿದೆ ಮತ್ತು ನೀನು ಮುಂದೆ ಏನು ಮಾಡುತ್ತೀರಿ ಎಂಬುದು ನಮಗೆ ತಿಳಿದಿಲ್ಲ ಎಂದು ಹೇಳಿದರು. ಹೀಗೆ ಅಬ್ದುಲ್ಲಾ ಅವರೊಂದಿಗೆ ಹೋಗಲು ನಿರಾಕರಿಸಿದರು. ಅದಕ್ಕೆ ಅವಿಶ್ವಾಸಿಗಳು ಅಬ್ದುಲ್ಲಾರನ್ನು ಸ್ವಲ್ಪ ದೂರ ಎಳೆದುಕೊಂಡು ಹೊಡೆದರು, ನಂತರ ಅವರನ್ನು ವಧಿಸಿ ಅಲ್ಲಿಯೇ ಎಸೆದರು ಹೀಗೆ ಈಗ ಅವರ ಸೇಡು ತೀರಿಸಿಕೊಳ್ಳಲಾಗಿತ್ತು. ಅವರು ಖುರೈಷಿಗಳನ್ನು ಸಂತೋಷಪಡಿಸಲು ಮತ್ತು ಹಣದ ದುರಾಸೆಗಾಗಿ, ಅವರು ಖುಬೈಬ್ ಮತ್ತು ಝೈದ್ ಅವರನ್ನು ಕರೆದುಕೊಂಡು ಮಕ್ಕಾಗೆ ಹೊರಟರು. ಅಲ್ಲಿಗೆ ತಲುಪಿದ ಅವರು ಅವರಿಬ್ಬರನ್ನು ಖುರೈಷಿಗಳಿಗೆ ಮಾರಾಟ ಮಾಡಿದರು. ಖುಬೈಬ್(ರ)ರನ್ನು ಹಾರಿಸ್ ಬಿನ್ ಆಮಿರ್ ಬಿನ್ ನೌಫಲಿನ ಪುತ್ರರು ಖರೀದಿ ಮಾಡಿದರು. ಏಕೆಂದರೆ ಖುಬೈಬ್(ರ) ಬದ್ರ್ ಯುದ್ಧದಲ್ಲಿ ಹಾರಿಸ್‌ನನ್ನು ವಧಿಸಿದ್ದರು. ಝೈದ್ ಬಿನ್ ದಸ್‌ನ(ರ)ರನ್ನು ಸಫ್‌ವಾನ್ ಬಿನ್ ಉಮಯ್ಯ ಖರೀದಿ ಮಾಡಿದನು. (ಸೀರತ್ ಖಾತಮನ್ನಬೀಯೀನ್(ಸ), ಹರ್ಝ್‌ರತ್ ಸಾಹಿಬ್‌ಝಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ(ರ), ಪುಟ-514)

ಹರ್ಝ್‌ರತ್ ಖುಬೈಬ್ ಬಿನ್ ಅದಿ(ರ) ಮತ್ತು ಹರ್ಝ್‌ರತ್ ಝೈದ್ ಬಿನ್ ದಸಿನಾ(ರ) ಅವರನ್ನು ಮುಶ್ರಿಕೀನರು ಬಂಧಿಸಿ ಮಕ್ಕಾಗೆ ಕರೆದೊಯ್ದರು. ಮಕ್ಕಾಗೆ ತಲುಪಿ ಅವರು ಆ ಇಬ್ಬರು ಸಹಾಬೀಯರನ್ನು ಮಾರಾಟ ಮಾಡಲಾಯಿತು. ಹಿಂದೆ ಹೇಳಿದಂತೆ ಹಾರಿಸ್ ಬಿನ್ ಆಮಿರ್ ಅವರ ಮಕ್ಕಳು ಹರ್ಝ್‌ರತ್ ಖುಬೈಬ್(ರ) ಅವರನ್ನು ಖರೀದಿಸಿದರು, ಇದರಿಂದ ಅವರು ಬದ್ರ್ ದಿನದಂದು ಖುಬೈಬ್‌ರಿಂದ ವಧಿಸಲ್ಪಟ್ಟ ತಮ್ಮ ತಂದೆ ಹಾರಿಸ್‌ನ ಹತ್ಯೆಗೆ ಸೇಡು ತೀರಿಸಿಕೊಳ್ಳಬಹುದು. ಇಬ್ನ್ ಇಸ್‌ಹಾಕ್ ಅವರ ಪ್ರಕಾರ, ಹುಜೈರ್ ಬಿನ್ ಅಬು ಇಹಾಬ್ ತಮೀಮಿ ಅವರು ಹಾರಿಸ್‌ನ ಅವರ ವಂಶಸ್ಥರ ಮಿತ್ರರಾಗಿದ್ದ ಹರ್ಝ್‌ರತ್ ಖುಬೈಬ್(ರ) ಅವರನ್ನು ಖರೀದಿಸಿದರು. ಹ್ಯಾರಿಸ್‌ನ ಪುತ್ರ ಉಕ್ಬಾ ತನ್ನ ತಂದೆಯ ಹತ್ಯೆಗೆ ಸೇಡು ತೀರಿಸಿಕೊಳ್ಳಲು ಹರ್ಝ್‌ರತ್ ಖುಬೈಬ್(ರ)ರನ್ನು ಅವನಿಂದ ಖರೀದಿಸಿದನು ಎಂದೂ ಸಹ ಹೇಳಲಾಗುತ್ತದೆ. ಉಕ್ಬಾ ಬಿನ್ ಹಾರಿಸ್ ಅವರು ಬನೂ ನಜ್ಜಾರ್ ಅವರಿಂದ ಹರ್ಝ್‌ರತ್ ಖುಬೈಬ್ ಅವರನ್ನು ಖರೀದಿಸಿದರು ಎಂದು ಸಹ ಹೇಳಲಾಗಿದೆ. ಅಬು ಇಹಾಬ್, ಇಕ್ರಿಮಾ ಬಿನ್ ಅಬು ಜಹ್ಲ್, ಅಖ್ನಸ್ ಬಿನ್ ಶುರೈಕ್, ಉಬೈದಾ ಬಿನ್ ಹಕೀಮ್, ಉಮಯ್ಯ ಬಿನ್ ಅಬು ಉತ್ಬಾ ಹಜ್ರಮಿ ಮತ್ತು ಸಫ್ವಾನ್ ಬಿನ್ ಉಮಯ್ಯ ಅವರು ಹರ್ಝ್‌ರತ್ ಖುಬೈಬ್(ರ) ಅವರನ್ನು ಒಟ್ಟಿಗೆ ಖರೀದಿಸಿದರು ಎಂದು ಸಹ ಹೇಳಲಾಗಿದೆ. ಇವರೆಲ್ಲರೂ ಬದ್ರ್ ಯುದ್ಧದಲ್ಲಿ ತಮ್ಮ ತಮ್ಮ ತಂದೆಯನ್ನು ಕಳೆದುಕೊಂಡ ಜನರಾಗಿದ್ದರು. ಅವರೆಲ್ಲರೂ ಹರ್ಝ್‌ರತ್

ಖುಬೈಬ್ ಅವರನ್ನು ಖರೀದಿಸಿ ಉಕ್ಬಾ ಬಿನ್ ಹಾರಿಸ್ ಅವರಿಗೆ ನೀಡಿದರು, ಅವನು ತನ್ನ ಮನೆಯಲ್ಲಿ ಅವರನ್ನು ಬಂಧಿಸಿದನು. (ಅಲ್‌ – ಇಸ್ತಿಯಾಬ್, ಭಾಗ–2, ಪುಟ–442, 440, ದಾರುಲ್ ಜೂಲ್ ಬೈರುತ್ 1992)

ಮಕ್ಕಾದಲ್ಲಿದ್ದ ಹುಝೈಲ್‌ನ ಕೈದಿಗಳಿಗೆ ಬದಲಾಗಿ ಅವರಿಬ್ಬರನ್ನು ಅಂದರೆ ಹಝ್ರತ್ ಖುಬೈಬ್(ರ) ಮತ್ತು ಹಝ್ರತ್ ಝೈದ್ ಬಿನ್ ದಸಿನಾ(ರ) ಅವರನ್ನು ಮಾರಿದರು ಎಂದು ಇಬ್ನ್ ಹಿಶಾಮ್ ಹೇಳುತ್ತಾರೆ. ಹಝ್ರತ್ ಝೈದ್(ರ) ಅವರು ಒಂದು ಮಿಸ್ಕಾಲ್ ಚಿನ್ನಕ್ಕೆ ಮಾರಲ್ಪಟ್ಟರು ಮತ್ತು ಒಂದು ಹೇಳಿಕೆಯ ಪ್ರಕಾರ ಅವರನ್ನು ಐವತ್ತು ಒಂಟೆಗಳಿಗೆ ಮಾರಾಟ ಮಾಡಲಾಯಿತು ಮತ್ತು ಹಝ್ರತ್ ಖುಬೈಬ್(ರ) ಅವರನ್ನು ಐವತ್ತು ಒಂಟೆಗಳಿಗೆ ಮಾರಾಟ ಮಾಡಲಾಯಿತು ಎಂಬ ವರಸಿ ಇದೆ. ಕೆಲವು ವರದಿಗಳ ಪ್ರಕಾರ, ಹಝ್ರತ್ ಖುಬೈಬ್(ರ) ಅವರನ್ನು ನೂರು ಒಂಟೆಗಳಿಗೆ ಮಾರಾಟ ಮಾಡಲಾಯಿತು ಮತ್ತು ಇನ್ನೊಂದು ವರದಿಯ ಪ್ರಕಾರ, ಅವರು ಎಂಬತ್ತು ಮಿಸ್ಕಾಲ್ ಚಿನ್ನಕ್ಕೆ ಮಾರಲಾಯಿತು. ಅವರಲ್ಲಿ ಕೆಲವರು ಖುರೈಶ್‌ಗೆ ಸೇರಿದರು ಮತ್ತು ಅವರು ಅವರಿಬ್ಬರೊಂದಿಗೆ ಅಂದರೆ ಹಝ್ರತ್ ಖುಬೈಬ್ ಮತ್ತು ಝೈದ್ ಬಿನ್ ದಸಿನಾ ಅವರೊಂದಿಗೆ ಧುಲ್–ಖಅ್‌ದಃದ ಪವಿತ್ರ ತಿಂಗಳನ್ನು ಪ್ರವೇಶಿಸಿದರು ಮತ್ತು ಪವಿತ್ರ ತಿಂಗಳು ಮುಗಿಯುವವರೆಗೆ ಅವರನ್ನು ಬಂಧನದಲ್ಲಿ ಇಟ್ಟಿದ್ದರು ಎಂದು ಹೇಳಲಾಗುತ್ತದೆ. (ಇಮ್ತಾಉಲ್ ಅಸ್ಮಾ, ಭಾಗ–13, ಪುಟ–275, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್) (ದಾಎರಾ ಮಾರಿಫ್, ಮುಹಮ್ಮದ್ ರಸುಲುಲ್ಲಾ ಅವರ ಜೀವನಚರಿತ್ರೆ, ಸಂಪುಟ–7, ಪುಟ–142, ಬಿಜ್ಮ್ ಇಕ್ಬಾಲ್, ಲಾಹೋರ್, 2022) (ಸಬ್ಲುಲ್ ಹುದಾ ವರ್ರಶ್ಶಾದ್, ಸಂಪುಟ–6, ಪುಟ–41, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ಕಳೆದ ಖುತ್‌ಬದಲ್ಲಿ, ನಾನು ಪವಿತ್ರ ಮಾಸಗಳನ್ನು ವಿವರವಾಗಿ ಚರ್ಚಿಸಿದ್ದೇನೆ. ಇಬ್ನ್ ಇಸ್‌ಹಾಕ್ ಮತ್ತು ಇಬ್ನ್ ಸಅದ್ ಅವರು ಹೇಳುತ್ತಾರೆ: ಹಝ್ರತ್ ಝೈದ್(ರ) ಅವರನ್ನು ಸಫ್ವಾನ್ ಬಿನ್ ಉಮಯ್ಯ ತನ್ನ ತಂದೆ ಉಮಯ್ಯ ಬಿನ್ ಖಲಫ್ ಅವರನ್ನು ವಧಿಸಿದ್ದರಿಂದ ಅದರ ಸೇಡನ್ನು ತೀರಿಸಿಕೊಳ್ಳಲು ಖರೀದಿಸಿದರು ಎಂದು ಹೇಳುತ್ತಾರೆ. ಸಫ್ವಾನ್ ನಂತರ ಮುಸ್ಲಿಂ ಆದರು. ಅವನು ಅವರನ್ನು ಬನು ಜುಮ್ಮಾದ ಜನರ ಬಳಿ ಬಂಧನದಲ್ಲಿಟ್ಟಿದ್ದರು. ಮತ್ತು ಅವನು ಅವರನ್ನು ತನ್ನ ಗುಲಾಮ ನಿಸ್ತಾಸ್‌ನೊಂದಿಗೆ ಇರಿಸಿದನು ಎಂದು ಸಹ ಹೇಳಲಾಗುತ್ತದೆ. ಹೀಗೆ ಪವಿತ್ರ ಮಾಸಗಳು ಮುಗಿದ ನಂತರ, ಸಫ್ವಾನ್ ತನ್ನ ಗುಲಾಮ ನಿಸ್ತಾಸ್ ನನ್ನು ತನೀಮ್ಗೆ ಕಳುಹಿಸಿದನು. ತನೀಮ್ ಮಕ್ಕಾದಿಂದ ಮದೀನಾ ಮತ್ತು ಸಿರಿಯಾದ ದಿಕ್ಕಿನಲ್ಲಿ ಮೂರು ಅಥವಾ ನಾಲ್ಕು ಮೈಲುಗಳಷ್ಟು ದೂರದಲ್ಲಿದೆ. ಆದಾಗ್ಯೂ, ಅವರನ್ನು ಕೊಲ್ಲಲು ಅವರನ್ನು ಹರಾವ್‌ನಿಂದ ಹೊರಗೆ ಕರೆದೊಯ್ಯಲಾಯಿತು ಮತ್ತು ಖುರೈಷಿಗಳ ಗುಂಪು ಕೂಡ ಜಮಾಯಿಸಿತು. ಹಝ್ರ್‌ರತ್ ಝೈದ್ ಬಿನ್ ದಸ್‌ನ(ರ)ರನ್ನು ಶಹೀದ್ ಮಾಡಲು ತರಲಾದಾಗ ಅಬೂಸುಫ್‌ಯಾನ್ ಬಿನ್ ಹರಬ್ ಅವರೊಡನೆ ಕೇಳಿದರು: ಎಲೈ ಝೈದ್, ನಾನು ಅಲ್ಲಾಹನ ಹೆಸರಲ್ಲಿ ಆಣೆ ಹಾಕಿ ಕೇಳುತ್ತೇನೆ. ನಿನ್ನ ಜಾಗದಲ್ಲಿ ನಮ್ಮ ಬಳಿ ಮುಹಮ್ಮದ್ (ಸಲ್ಲಲ್ಲಾಹು ಅಲೈಹಿ ವಸಲ್ಲಂ) ಇರಬೇಕಿತ್ತು ಮತ್ತು ನಾವು ನಿನ್ನ ಬದಲಿಗೆ ಮುಹಮ್ಮದ್‌ರ (ಸಲ್ಲಲ್ಲಾಹು ಅಲೈಹಿ ವಸಲ್ಲಂ) ತಲೆಯನ್ನು ಕತ್ತರಿಸಬೇಕು ಮತ್ತು ನೀನು ನಿನ್ನ ಕುಟುಂಬದೊಂದಿಗೆ ಇರಬೇಕಿತ್ತು ಎಂದು ನೀನು ಬಯಸುವುದಿಲ್ಲವೇ? ಹಝ್ರ್‌ರತ್ ಝೈದ್(ರ) ಹೇಳಿದರು: ಅಲ್ಲಾಹನಾಣೆ, ನಾನು ನನ್ನ ಕುಟುಂಬದವರೊಡನೆ ಇದ್ದುಕೊಂಡಿರುವಾಗ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಯಾವ ಮನೆಯಲ್ಲಿ ಇರುವರೋ ಅಲ್ಲಿ ಅವರಿಗೆ ಒಂದು ಮುಳ್ಳು ಚುಚ್ಚಿ ನೋವಾಗುವುದನ್ನು ಕೂಡ ನಾನು ಇಷ್ಟಪಡುವುದಿಲ್ಲ. ಆಗ ಅಬುಸುಫ್‌ಯಾನ್ ಹೇಳಿದನು: ಮುಹಮ್ಮದ್‌ರ (ಸಲ್ಲಲ್ಲಾಹು ಅಲೈಹಿ ವಸಲ್ಲಮ್) ಸಹಾಬಿಯರು ಮುಹಮ್ಮದ್‌ರನ್ನು ಪ್ರೀತಿಸುವ ಹಾಗೆ ಜನರಲ್ಲಿ ಯಾರಾದರೂ ಯಾರನ್ನಾದರೂ ಪ್ರೀತಿಸುವುದಾಗಿ ನಾನು ಕಂಡಿಲ್ಲ.

ಅನಂತರ ಹಝ್ರ್‌ರತ್ ಝೈದ್(ರ)ರನ್ನು ಶಹೀದ್ ಮಾಡಲಾಯಿತು. ಒಂದು ವರದಿಯ ಪ್ರಕಾರ, ಅವರೊಂದಿಗೆ, ಖುರೈಷ್‌ನ ಇತರ ಕೆಲವು ಜನರು ಅವರು ಹುತಾತ್ಮನಾಗುವವರೆಗೂ ಬಾಣಗಳಿಂದ ಹೊಡೆಯಲು ಪ್ರಾರಂಭಿಸಿದರು. ನಂತರ, ಕೊಲೆಗಾರನಾಗಿದ್ದ ಈ ನಿಸ್ತಾಸ್ ಕೂಡ ಮುಸ್ಲಿಮನಾದನು, ಝೈದ್(ರ) ಮತ್ತು ಖುಬೈಬ್(ರ) ಇಬ್ಬರೂ ಒಂದೇ ದಿನದಲ್ಲಿ ಹುತಾತ್ಮರಾದರು. ಅವರಿಬ್ಬರೂ ಹುತಾತ್ಮರಾದ ದಿನ, ಹಝ್ರತ್ ಪೈಗಂಬರ್(ಸ) ಅವರಿಗೆ ಇದರ ಬಗ್ಗೆ ತಿಳಿಸಿದಾಗ ಅವರು(ಸ) ಹೇಳಿದರು: ವ ಅಲೈಕುಮಾ ಅಸ್ಸಲಾಮ್ ನಿಮ್ಮಿಬ್ಬರ ಮೇಲೆ ಶಾಂತಿ ಇರಲಿ.
(ಸಬ್ಲುಲ್ ಹುದಾ ವರ್ರಶ್ಶಾದ್, ಸಂಪುಟ–6, ಪುಟ–42, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್) (ಶರ್ಹ್ ಝುರ್ಖಾನಿ, ಸಂಪುಟ–2, ಪುಟ–493, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್, 1998) (ಝೋರ್ ಅಕಾಡೆಮಿ ಕರಾಚಿ ಪ್ರಕಟಿಸಿದ ಫರ್ಹಾಂಗ್ ಸೀರತ್, ಪುಟ–77)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಈ ಘಟನೆಯನ್ನು ವಿವರಿಸಿದ್ದಾರೆ. ಅವರು ಹೇಳುತ್ತಾರೆ: "ಸಫ್ವಾನ್ ಬಿನ್ ಉಮಯ್ಯ ತನ್ನ ಖೈದಿ ಝೈದ್ ಬಿನ್ ದಸ್ನಾಹ್ ಅವರೊಂದಿಗೆ ಹರವ್‌ನಿಂದ ಹೊರಬಂದರು. ಖುರೈಷ್‌ರ ಮುಖ್ಯಸ್ಥರ ಗುಂಪು ಅವನೊಂದಿಗಿತ್ತು. ಹೊರಗೆ ಬಂದ ಸಫ್ವಾನ್ ತನ್ನ ಗುಲಾಮ ನಿಸ್ತಾಸ್‌ಗೆ ಝೈದ್‌ನನ್ನು ವಧಿಸಲು ಆದೇಶಿಸಿದನು. ನಿಸ್ತಾಸ್ ಮುಂದೆ ಹೆಜ್ಜೆ ಹಾಕಿ ತನ್ನ ಖಡ್ಗವನ್ನು ಎತ್ತಿದನು. ಆ ಸಮಯದಲ್ಲಿ, ಸಭಿಕರಲ್ಲಿದ್ದ ಮಕ್ಕಾದ ದೊರೆ ಅಬು ಸುಫ್ಯಾನ್ ಬಿನ್ ಹರ್ಬ್ ಮುಂದೆ ಹೆಜ್ಜೆ ಹಾಕಿ ಝೈದ್‌ಗೆ ಹೇಳಿದರು. "ನಿಜ ಹೇಳು, ಈ ಸಮಯದಲ್ಲಿ ನಿನ್ನ ಜಾಗದಲ್ಲಿ ನಮ್ಮ ಬಳಿ ಮುಹಮ್ಮದ್ (ಸಲ್ಲಲ್ಲಾಹು ಅಲೈಹಿ ವಸಲ್ಲಂ) ಇರಬೇಕಿತ್ತು ಮತ್ತು ನಾವು ನಿನ್ನ ಬದಲಿಗೆ ಮುಹಮ್ಮದ್‌ರ (ಸಲ್ಲಲ್ಲಾಹು ಅಲೈಹಿ ವಸಲ್ಲಂ) ತಲೆಯನ್ನು ಕತ್ತರಿಸಬೇಕು ಮತ್ತು ನೀನು ನಿನ್ನ ಕುಟುಂಬದೊಂದಿಗೆ ಇರಬೇಕಿತ್ತು ಎಂದು ನೀನು ಬಯಸುವುದಿಲ್ಲವೇ? ಹಝ್ರ್‌ರತ್ ಝೈದ್(ರ) ಕೊಪಗೊಂಡು ಹೇಳಿದರು: "ಅಬುಸುಫ್ಯಾನ್! ನೀನು ಏನು ಹೇಳುತ್ತಿದ್ದೀಯ? ಅಲ್ಲಾಹನ ಆಣೆ! ನಾನು ತಪ್ಪಿಸಿಕೊಳ್ಳುವುದಕ್ಕೆ ಬದಲಾಗಿ ಹಝ್ರತ್ ಪೈಗಂಬರ್(ಸ)ರ ಪಾದಗಳಲ್ಲಿ ಒಂದು ಮುಳ್ಳು ಸಹ ಚುಚ್ಚುವುದು ನನಗೆ ಇಷ್ಟವಿಲ್ಲ." ಅಬುಸುಫ್ಯಾನ್ ಅಸಹಾಯಕತೆಯಿಂದ ಹೇಳಿದನು. ಮುಹಮ್ಮದ್‌ರ (ಸಲ್ಲಲ್ಲಾಹು ಅಲೈಹಿ ವಸಲ್ಲಮ್) ಸಹಾಬಿಯರು ಮುಹಮ್ಮದ್‌ರನ್ನು ಪ್ರೀತಿಸುವ ಹಾಗೆ ಜನರಲ್ಲಿ ಯಾರಾದರೂ ಯಾರನ್ನಾದರೂ ಪ್ರೀತಿಸುವುದಾಗಿ ನಾನು ಕಂಡಿಲ್ಲ. ಅನಂತರ ಹಝ್ರ್‌ರತ್ ಝೈದ್(ರ)ರನ್ನು ಶಹೀದ್ ಮಾಡಲಾಯಿತು." (ಸೀರ'ತ್ ಖಾತಮನ್ನಬೀಯೀನ್(ಸ), ಹಝ್ರತ್ ಸಾಹಿಬ್‌ಝಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ(ರ), ಪುಟ–516)

ಈ ವಧೆಯ ಘಟನೆಯ ಬಗ್ಗೆ ಹಝ್ರತ್ ಮುಸ್ಲೆಹ್ ಮೌಊದ್(ರ) ಬರೆಯುತ್ತಾರೆ: "ಈ ತಮಾಷೆಯನ್ನು ನೋಡಿದವರಲ್ಲಿ ಮಕ್ಕಾದ ನಾಯಕ ಅಬು ಸುಫ್ಯಾನ್ ಕೂಡ ಇದ್ದನು. ಆತನು ಝೈದ್(ರ)ರವರನ್ನು ಉದ್ದೇಶಿಸಿ ಕೇಳಿದನು: ಮುಹಮ್ಮದ್(ಸ) ನಿನ್ನ ಸ್ಥಾನದಲ್ಲಿರುವುದು ಮತ್ತು ನೀನು ನಿನ್ನ ಮನೆಯಲ್ಲಿ ಆರಾಮವಾಗಿ ಕುಳಿತುಕೊಳ್ಳುವುದು ನಿನಗೆ ಇಷ್ಟವಿಲ್ಲವೇ? ಝೈದ್(ರ) ಬಹಳ ಕೋಪದಿಂದ ಅಬೂಸುಫ್ಯಾನ್‌ಗೆ ಉತ್ತರಿಸಿದರು ಅನೂಸುಫ್ಯಾನ್! ನೀನು ಏನು ಹೇಳುತ್ತೀದ್ದೀಯ? ಅಲ್ಲಾಹನ ಆಣೆ! ಹಝ್ರತ್ ಪೈಗಂಬರ್(ಸ) ಅವರಿಗೆ ಮದೀನಾದ ಬೀದಿಯಲ್ಲಿ ಒಂದು ಮುಳ್ಳು ಚುಚ್ಚುವುದಕ್ಕಿಂತ ನನಗೆ ನಾನು ಸಾಯುವುದೇ ಮೇಲು. ಅಬು ಸುಫ್ಯಾನ್ ಈ ನಿಷ್ಠೆಯಿಂದ ಪ್ರಭಾವಿತನಾಗದೆ ಇರಲು ಸಾಧ್ಯವಿಲ್ಲ ಮತ್ತು ಅವನು ಝೈದ್‌ನನ್ನು ಆಶ್ಚರ್ಯದಿಂದ ನೋಡಿದನು ಮತ್ತು ಅಸಹಾಯಕತೆಯಿಂದ ಹೇಳಿದನು: ಮುಹಮ್ಮದ್‌ರ (ಸಲ್ಲಲ್ಲಾಹು ಅಲೈಹಿ ವಸಲ್ಲಮ್) ಸಹಾಬಿಯರು ಮುಹಮ್ಮದ್‌ರನ್ನು ಪ್ರೀತಿಸುವ ಹಾಗೆ ಜನರಲ್ಲಿ ಯಾರಾದರೂ ಯಾರನ್ನಾದರೂ ಪ್ರೀತಿಸುವುದಾಗಿ ನಾನು ಕಂಡಿಲ್ಲ. (ದೀಬಾಚಾ ತಫ್ಸೀರುಲ್ ಖುರ್‌ಆನ್, ಅನ್ವಾರುಲ್ ಉಲೂಮ್, ಸಂಘುಟ–20, ಪುಟ–262–263)

ಓರ್ವ ಜೀವನಚರಿತ್ರೆಕಾರರು ಹಝ್ರತ್ ಖುಬೈಬ್(ರ) ಅವರ ಹುತಾತ್ಮತೆಯನ್ನು ಉಲ್ಲೇಖಿಸುವಾಗ ಬರೆಯುತ್ತಾರೆ: ಹಝ್ರತ್ ಖುಬೈಬ್(ರ) ಹುಜೈರ್ ಬಿನ್ ಅಬು ಇಹಾಬ್ ಅವರ ವಶದಲ್ಲಿದ್ದರು ಮತ್ತು ಹಾರಿಸ್ ಬಿನ್ ನೌಫಲ್ ಅವರ ಪುತ್ರರ ಮನೆಯಲ್ಲಿ ವಾಸಿಸುತ್ತಿದ್ದರು. ಹಝ್ರ್‌ರತ್ ಖುಬೈಬ್(ರ)ರೊಂದಿಗೆ ಹಾರಿಸ್‌ನ ಪುತ್ರರು ಬಹಳ ಕೆಟ್ಟದ್ದಾಗಿ ವರ್ತಿಸಿದರು. ಹಝ್ರ್‌ರತ್ ಖುಬೈಬ್(ರ) ಅವರೊಡನೆ ಹೇಳಿದರು: ಯಾವುದೇ ಆದರಣೀಯ ಸಮುದಾಯ ಎಂದಿಗೂ ತಮ್ಮ ಕೈದಿಗಳೊಡನೆ ಹೀಗೆ ವರ್ತಿಸುವುದಿಲ್ಲ. ಸತ್ಯನಿಷೇಧಿಗಳ ಮೇಲೆ ಈ ಮಾತಿನ ಪ್ರಭಾವ ಉಂಟಾಯಿತು. ಅವರು ಅನಂತರ ಅವರೊಂದಿಗೆ ಉತ್ತಮವಾಗಿ ವರ್ತಿಸಲು ಆರಂಭಿಸಿದರು. (ದಾಎರಾ ಮುಆರಿಫ್ ಸೀರತ್ ಮುಹಮ್ಮದ್ ರಸೂಲುಲ್ಲಾಹ್(ಸ), ಸಂಪುಟ–7, ಪುಟ–144, ಬಝ್ಮ್ ಇಖ್ಬಾಲ್ ಲಾಹೋರ್ 2022)

ಇಬ್ನ್ ಶಿಹಾಬ್ ಹೇಳುತ್ತಿದ್ದರು ಉಬೈದುಲ್ಲಾ ಬಿನ್ ಇಯಾಝ್ ನನಗೆ ಹೇಳಿದರು: ಹಾರಿಸ್‌ನ ಪುತ್ರಿ ಒಮ್ಮೆ ಅವರಿಗೆ ಹೇಳಿದಳು: ಸತ್ಯನಿಷೇಧಿಗಳು ಅವರನ್ನು ವಧಿಸಲು ಒಪ್ಪಿಕೊಂಡಾಗ ಖುಬೈಬ್(ರ) ಅವರಲ್ಲಿ ಒಂದು ಕ್ಷೌರಕತ್ತಿ (ರೇಝರ್) ಕೇಳಿದರು. ಹೀಗೆ ಅವರು ಅವರಿಗೆ ಆ ಕ್ಷೌರಕತ್ತಿಯನ್ನು ನೀಡಿದರು. ಹಾರಿಸ್‌ನ ಪುತ್ರಿ ಹೇಳುತ್ತಾಳೆ: ಆ

ಸಮಯದಲ್ಲಿ ನನ್ನ ಅಜಾಗರೂಕತೆಯ ಸಂದರ್ಭದಲ್ಲಿ ನನ್ನ ಓರ್ವ ಮಗು ಹಝ್ರ್‌ರತ್ ಖುಬೈಬ್(ರ) ಅವರ ಸಮೀಪಕ್ಕೆ ಬಂತು. ಹಝ್ರ್‌ರತ್ ಖುಬೈಬ್(ರ)ರ ಕೈಯಲ್ಲಿ ಆಗ ಒಂದು ಕ್ಷೌರಕತ್ತಿ ಇತ್ತು. ಅವರು ಮಗುವನ್ನು ತನ್ನ ತೊಡೆಯ ಮೇಲೆ ಕೂರಿಸಿದ್ದರು. ಅದನ್ನು ನೋಡಿದ ಮಗುವಿನ ತಾಯಿಗೆ ಅವರು ಆ ಮಗುವಿಗೆ ಏನಾದರೂ ಹಾನಿ ಮಾಡುವರೋ ಎಂಬ ಭಯ ಉಂಟಾಯಿತು. ಆ ಮಹಿಳೆಯ ಮುಖದಲ್ಲಿ ಗೋಚರಿಸುತ್ತಿದ್ದ ಆ ಭಯವನ್ನು ನೋಡಿ ಹಝ್ರ್‌ರತ್ ಖುಬೈಬ್(ರ) ಹೇಳಿದರು: ನಾನು ಈ ಮಗುವಿಗೆ ಹಾನಿ ಉಂಟುಮಾಡುವೆನೋ ಎಂಬ ಭಯ ನಿನಗೆ ಇದೆಯೇ? ಅಲ್ಲಾಹನಾಣೆ ನಾನು ಹಾಗೆ ಮಾಡಲಾರೆ. ಮುಸ್ಲಿಮರು ವಾಗ್ದಾನ ಮಾಡಿದ ನಂತರ ಅದನ್ನು ಈಡೇರಿಸುತ್ತಾರೆಯೇ ಹೊರತು ಹಿಂಸಾಚಾರ ಮಾಡುವುದಿಲ್ಲ.

ಹಾರಿಸ್‌ನ ಪುತ್ರಿ ಹೇಳುತ್ತಾಳೆ: ಅಲ್ಲಾಹನ ಆಣೆ! ಖುಬೈಬ್(ರ)ಗಿಂತ ಉತ್ತಮವಾದ ಕೈದಿಯನ್ನು ನಾನು ಎಂದಿಗೂ ನೋಡಿಲ್ಲ. ದ್ರಾಕ್ಷೆಯ ಒಂದು ಗೊಂಚಲು ಅವರ ಕೈಯಲ್ಲಿ ಇರುವುದಾಗಿಯೂ ಅವರು ಅದರಿಂದ ತಿನ್ನುವುದಾಗಿಯೂ ನಾನು ಒಮ್ಮೆ ನೋಡಿದ್ದೆ. ಅವರನ್ನು ಸರಪಳಿಯಿಂದ ಕಟ್ಟಲಾಗಿತ್ತು. ಆ ದಿನಗಳಲ್ಲಿ ಮಕ್ಕದಲ್ಲಿ ಯಾವುದೇ ಹಣ್ಣು ಇದ್ದಿರಲಿಲ್ಲ. ಅದು ಅಲ್ಲಾಹನು ಹಝ್ರ್‌ರತ್ ಖುಬೈಬ್(ರ)ರಿಗೆ ನೀಡಿದ ಆಹಾರವಾಗಿತ್ತು.

ಶಹೀದ್ ಮಾಡಲಿಕ್ಕಾಗಿ ಖುರೈಶಿಯರು ಅವರನ್ನು ಹರಮಿನಿಂದ ಹೊರಗೆ ಕೊಂಡು ಹೋಗುವಾಗ ಅವರು ಎರಡು ರಕಅತ್ ನಮಾಝ್ ನಿರ್ವಹಿಸಲು ಅನುಮತಿ ಕೇಳಿದರು. ಖುರೈಶಿಯರು ಅವರಿಗೆ ಅನುಮತಿ ಕೊಟ್ಟರು. ಹಝ್ರ್‌ರತ್ ಖುಬೈಬ್(ರ) ನಮಾಝ್ ನಿರ್ವಹಿಸಿದರು ಮತ್ತು ಹೀಗೆ ಹೇಳಿದರು: ನಾನು ಮರಣ ಭಯದ ಕಾರಣದಿಂದ ತಡಮಾಡುತ್ತಿದ್ದೇನೆ ಎಂದು ನೀವು ಹೇಳುವಿರಿ ಎಂಬ ಚಿಂತೆಯಿಂದ ನಾನು ನಮಾಝನ್ನು ಹ್ರಸ್ವವಾಗಿ ನಿರ್ವಹಿಸಿದೆ. ಅನಂತರ ಅವರು ಅಲ್ಲಾಹನಲ್ಲಿ ಹೀಗೆ ದುಆ ಮಾಡಿದರು: ಹೇ ಅಲ್ಲಾಹ್, ಈ ಶತ್ರುಗಳನ್ನು ಒಬ್ಬೊಬ್ಬರನ್ನಾಗಿ ನಾಶಮಾಡು. ಹಝ್ರ್‌ರತ್ ಖುಬೈಬ್(ರ) ಒಂದು ಪದ್ಯವನ್ನು ಸಹ ಹೇಳಿದರು.

**ವಲಸ್ತು ಉಬಾಲೀ ಹೀನ ಉಖ್ತಲು ಮುಸ್ಲಿಮನ್**
**ಅಲಾ ಅಯ್ಯಿ ಶಿಖ್ಖಿನ್ ಕಾನ ಲಿಲ್ಲಾಹಿ ಮಿಸ್ರಈ**
**ವಝಾಲಿಕ ಫೀ ಝಾತಿಲ್‌ಇಲಾಹಿ ವ ಇಂಯಶಾ**
**ಯುಬಾರಿಕ್ ಅಲಾ ಅವ್‌ಸಾಲಿ ಶಿಲ್‌ವಿಂ ಮುಮಝ್ಝಇ**

ಅದರ ಅರ್ಥ ಹೀಗಿದೆ: ನಾನು ಮುಸ್ಲಿಮನಾಗಿರುವ ಸ್ಥಿತಿಯಲ್ಲಿ ವಧಿಸಲ್ಪಡುತ್ತಿರುವಾಗ ಅಲ್ಲಾಹನಿಗಾಗಿ ಯಾವ ಭಾಗಕ್ಕೆ ಬೀಳುವೆನು ಎಂಬುದರ ಬಗ್ಗೆ ನನಗೆ ಪರಿವೆ ಇಲ್ಲ. ನನ್ನ ಬೀಳುವಿಕೆ ಅಲ್ಲಾಹನಿಗಾಗಿದೆ ಮತ್ತು ಅವನು ಬಯಸುವುದಾದರೆ ತುಂಡರಿಸಲಾದ ದೇಹದ ಭಾಗಗಳನ್ನು ಅನುಗ್ರಹಿಸಬಹುದು. ಅನಂತರ ಸತ್ಯನಿಷೇಧಿಗಳು ಅವರನ್ನು ಅತ್ಯಂತ ಕ್ರೂರವಾಗಿ ಶಹೀದ್ ಮಾಡಿದರು. (ಸಹೀಹ್ ಬುಖಾರಿ ಕಿತಾಬುಲ್ ಜಿಹಾದ್ ವಸ್ಸೈರ್, ಹದೀಸ್-3045)

ಹಝ್ರ್‌ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಅವರು ಹಝ್ರ್‌ರತ್ ಖುಬೈಬ್(ರ) ಅವರ ಸೆರೆವಾಸದ ಘಟನೆಯನ್ನು ಈ ಕೆಳಗಿನಂತೆ ವಿವರಿಸಿದ್ದಾರೆ: "ಈಗ ಈ ಇಬ್ಬರು ಸಹಾಬೀಯರು ಖುರೈಷೀಯರ ಬಳಿ ಗುಲಾಮರಾಗಿದ್ದರು, ಒಂದು ದಿನ ಖುಬೈಬ್(ರ) ಹಾರಿಸ್‌ನ ಪುತ್ರಿಗೆ ಅವರ ಅಗತ್ಯಗಳಿಗಾಗಿ ಕ್ಷೌರಕತ್ತಿಯನ್ನು ಕೇಳಿದರು ಅದಕ್ಕೆ ಆಕೆಯು ಅದನ್ನು ಅವರಿಗೆ ನೀಡಿದಳು. ಈ ಕ್ಷೌರಕತ್ತಿಯು (ರೇಜರ್) ಖುಬೈಬ್‌ರ ಕೈಯಲ್ಲಿದ್ದಾಗ, ಹಾರಿಸ್‌ನ ಪುತ್ರಿಯ ಓರ್ವ ಒಂದು ವರ್ಷದ ಮಗು ಖುಬೈಬ್‌ರ ಬಳಿ ಆಟವಾಡಲು ಬಂದಿತು ಮತ್ತು ಖುಬೈಬ್ ಆ ಮಗುವನ್ನು ತನ್ನ ತೊಡೆಯ ಮೇಲೆ ಕೂರಿಸಿದರು. ಆ ಸಂದರ್ಭದಲ್ಲಿ ಖುಬೈಬ್‌ರ ಕೈಯಲ್ಲಿ ರೇಜರ್ ಇದ್ದುದನ್ನು ಮತ್ತು ಮಗು ಅವರ ಮಡಿಲಲ್ಲಿ ಕುಳಿತಿದ್ದನ್ನು ಕಂಡ ತಾಯಿ ನಡುಗಿದಳು ಮತ್ತು ಅವಳ ಮುಖವು ವಿವರ್ಣವಾಯಿತು. ಆಕೆಯ ಭಯವನ್ನು ಅರ್ಥಮಾಡಿಕೊಂಡ ಖುಬೈಬ್ ಆಕೆಯನ್ನು ನೋಡಿದಾಗ, "ನಾನು ಈ ಮಗುವನ್ನು ಕೊಲ್ಲುತ್ತೇನೆ ಎಂದು ನೀವು ಭಾವಿಸುತ್ತೀರಾ? ಹೀಗೆ ಯೋಚಿಸಬೇಡಿ. ನಾನು ಇನ್‌ಶಾಅಲ್ಲಾಹ್ ಹಾಗೆ ಮಾಡುವುದಿಲ್ಲ. ಆ ಮಹಿಳೆ ಖುಬೈಬ್‌ರ ಉನ್ನತ ನೈತಿಕತೆಯಿಂದ ಪ್ರಭಾವಿತಳಾದಳು, ಅಲ್ಲಾಹನ ಆಣೆ! ಖುಬೈಬ್(ರ)ಗಿಂತ ಉತ್ತಮವಾದ ಕೈದಿಯನ್ನು ನಾನು ಎಂದಿಗೂ ನೋಡಿಲ್ಲ. ದ್ರಾಕ್ಷೆಯ ಒಂದು ಗೊಂಚಲು ಅವರ ಕೈಯಲ್ಲಿ ಇರುವುದಾಗಿಯೂ ಅವರು ಅದರಿಂದ ತಿನ್ನುವುದಾಗಿಯೂ ನಾನು ಒಮ್ಮೆ ನೋಡಿದ್ದೆ. ಅವರನ್ನು ಸರಪಳಿಯಿಂದ ಕಟ್ಟಲಾಗಿತ್ತು. ಆ ದಿನಗಳಲ್ಲಿ ಮಕ್ಕದಲ್ಲಿ ಯಾವುದೇ ಹಣ್ಣು ಇದ್ದಿರಲಿಲ್ಲ. ಅದು ಅಲ್ಲಾಹನು ಹಝ್ರ್‌ರತ್ ಖುಬೈಬ್(ರ)ರಿಗೆ ನೀಡಿದ ಆಹಾರವಾಗಿತ್ತು ಎಂದು ಹೇಳುತ್ತಿದ್ದಳು. (ಸೀರತ್ ಖಾತಮನ್ನಬೀಯೀನ್(ಸ), ಹಝ್ರತ್ ಸಾಹಿಬ್ಝಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ), ಪುಟ 514-515)

ಮತ್ತು ಒಂದು ವರದಿಯಲ್ಲಿ ಹಝ್ರತ್ ಖುಬೈಬ್ ಬಿನ್ ಅದೀ(ರ)ರವರ ಸೆರೆಮನೆಯ ಘಟನೆಯಲ್ಲಿ ಹೀಗೆ ಬರೆಯಲಾಗಿದೆ: ಮಾವಿಯಾ, ಹುಜೈರ್ ಬಿನ್ ಅಬು ಇಹಾಬ್‌ನ ಮುಕ್ತ ದಾಸಿಯಾಗಿದ್ದಳು. ಮಕ್ಕಾದಲ್ಲಿ, ಪವಿತ್ರ ಮಾಸಗಳು ಕಳೆದ ನಂತರ ಅವರನ್ನು ವಧಿಸಬೇಕು ಎಂದು ಹಝ್ರತ್ ಖುಬೈಬ್ ಬಿನ್ ಆದಿ(ರ) ಅವರನ್ನು ಅವರ ಮನೆಯಲ್ಲಿಯೇ ಬಂಧಿಸಲಾಯಿತು. ಮಾವಿಯಾ ನಂತರ ಇಸ್ಲಾಂಗೆ ಮತಾಂತರಗೊಂಡರು ಮತ್ತು ಉತ್ತಮ ಮುಸ್ಲಿಂ ಎಂದು ಸಾಬೀತುಪಡಿಸಿದರು. ಮಾವಿಯಾ ಅವರು ಈ ಘಟನೆಯನ್ನು ನಂತರ ಹೀಗೆ ವಿವರಿಸುತ್ತಿದ್ದರು: ಅಲ್ಲಾಹನ ಆಣೆ!! ಹಝ್ರತ್ ಖುಬೈಬ್(ರ) ಅವರಿಗಿಂತ ಉತ್ತಮವಾದ ಯಾರನ್ನೂ ನಾನು ನೋಡಲಿಲ್ಲ. ನಾನು ಅವರನ್ನು ಬಾಗಿಲಿನ ಬಿರುಕುಗಳಿಂದ ನೋಡುತ್ತಿದ್ದೆ ಅವರನ್ನು ಸರಪಳಿಯಲ್ಲಿ ಬಂಧಿಸಲಾಗಿತ್ತು ಮತ್ತು ನನ್ನ ಅರಿವಿನ ಪ್ರಕಾರ ಆ ಸಮಯದಲ್ಲಿ ಭೂಮಿಯ ಮೇಲೆ ತಿನ್ನಲು ಒಂದು ದ್ರಾಕ್ಷಿಯ ಕಾಳು ಇರಲಿಲ್ಲ, ಅಂದರೆ ಆ ಪ್ರದೇಶದಲ್ಲಿ ಯಾವುದೇ ಧಾನ್ಯವೂ ಇರಲಿಲ್ಲ. ಆ ಪ್ರದೇಶದಲ್ಲಿ ಯಾವುದೇ ದ್ರಾಕ್ಷಿಯು ಇರಲಿಲ್ಲ, ಆದರೆ ಹಝ್ರತ್ ಖುಬೈಬ್(ರ) ಅವರ ಕೈಯಲ್ಲಿ ಮನುಷ್ಯನ ತಲೆಯ ಗಾತ್ರಕ್ಕೆ ಸಮಾನವಾದ ದ್ರಾಕ್ಷಿಯ ಗೊಂಚಲು ಇತ್ತು, ಅಂದರೆ ಅದು ಸಾಕಷ್ಟು ದೊಡ್ಡ ಗೊಂಚಲು. ಇದು ಒಂದು ಬಾರಿಯ ಘಟನೆಯಲ್ಲ. ಅವರ ಪ್ರಕಾರ, ಅವರು ಅದನ್ನು ತಿನ್ನುವುದನ್ನು ಅನೇಕ ಬಾರಿ ನೋಡಿದ್ದಾರೆ. ಅದು ಸರ್ವಶಕ್ತನಾದ ಅಲ್ಲಾಹನ ಆಹಾರವಿಲ್ಲದೆ ಬೇರೇನೂ ಆಗಿರಲಿಲ್ಲ. ಹಝ್ರತ್ ಖುಬೈಬ್(ರ) ಅವರು ತಹಜ್ಜುದ್ ನಮಾಝಿನಲ್ಲಿ ಪವಿತ್ರ ಖುರ್‌ಆನ್ ಪಠಿಸುತ್ತಿದ್ದರು ಮಹಿಳೆಯರು ಅದನ್ನು ಕೇಳಿ ಅಳುತ್ತಿದ್ದರು ಮತ್ತು ಅವರಿಗೆ ಹಝ್ರತ್ ಖುಬೈಬ್(ರ)ರ ಮೇಲೆ ಕರುಣೆ ಬರುತ್ತಿತ್ತು. ಅವರು ಹೇಳುತ್ತಾರೆ: ಒಂದು ದಿನ ನಾನು ಹಝ್ರತ್ ಖುಬೈಬ್(ರ) ಅವರನ್ನು ಕೇಳಿದೆ: ಎಲೈ ಖುಬೈಬ್! ನಿಮಗೆ ಏನಾದರೂ ಅಗತ್ಯವಿದೆಯೇ? ಅದಕ್ಕೆ ಅವರು ಇಲ್ಲ ಎಂದು ಉತ್ತರಿಸಿದರು. ಹೌದು, ಒಂದು ವಿಷಯವಿದೆ: ನನಗೆ ತಣ್ಣೀರು ಕೊಡಿ ಮತ್ತು ವಿಗ್ರಹಗಳ ಹೆಸರಿನಲ್ಲಿ ವಧೆ ಮಾಡಿದ ಮಾಂಸವನ್ನು ನನಗೆ ಎಂದಿಗೂ ಕೊಡಬೇಡಿ. ನೀವು ಕೊಡುವ ಆಹಾರವು ಎಂದಿಗೂ ವಿಗ್ರಹಗಳ ಹೆಸರಿನಲ್ಲಿ ಹತ್ಯೆ ಮಾಡಲ್ಪಡಬಾರದು ಮತ್ತು ಮೂರನೆಯ ವಿಷಯವೆಂದರೆ ಜನರು ನನ್ನನ್ನು ಕೊಲ್ಲಲು ಉದ್ದೇಶಿಸಿದಾಗ, ನನಗೆ ತಿಳಿಸಿ. ನಂತರ ಪವಿತ್ರ ಮಾಸಗಳು ಕಳೆದ ನಂತರ ಜನರು ಹಝ್ರತ್ ಖುಬೈಬ್(ರ) ಅವರನ್ನು ವಧಿಸಲು ಒಮ್ಮತಗೊಂಡಾಗ, ನಾನು ಅವರ ಬಳಿಗೆ ಹೋಗಿ ಈ ಸುದ್ದಿಯನ್ನು ಅವರಿಗೆ ತಿಳಿಸಿದೆ. ಅವರು ಹೇಳುತ್ತಾರೆ: ಅಲ್ಲಾಹನ ಆಣೆ!! ಅವರು ತಮ್ಮ ವಧೆಯ ಬಗ್ಗೆ ಕಿಂಚಿತ್ತು ಭಯಭೀತರಾಗಲಿಲ್ಲ. ಮುಂದೆ ಅವರು ಹೇಳಿದರು: ನನ್ನನ್ನು ನಾನು ಸರಿಪಡಿಸಿಕೊಳ್ಳುವುದಕ್ಕೆ ನನಗೆ ಒಂದು ಕ್ಷೌರಕತ್ತಿ ನೀಡಿ ಎಂದು ಹೇಳಿದರು. ಅದಕ್ಕೆ ನಾನು ನನ್ನ ಪುತ್ರ ಅಬು ಹುಸೇನ್‌ಗೆ ರೇಜರ್ ಕೊಟ್ಟು ಅವರಿಗೆ ಕೊಡಲು ಕಳುಹಿಸಿದೆ. ವರದಿಗಾರರು ಹೇಳುತ್ತಾರೆ: ಆತನು ಅವರ ಸ್ವಂತ ಪುತ್ರ ಆಗಿರಲಿಲ್ಲ ಬದಲಿಗೆ ಮಾವಯ್ಯ ಅವರಿಗೆ ಪೋಷಿಸಿದರು. ಆದಾಗ್ಯೂ, ಮಗು ಅವರ ಬಳಿ ಹೊರಟುಹೋದಾಗ, ನನ್ನ ಮನಸ್ಸಿನಲ್ಲಿ ಆಲೋಚನೆ ಬಂದಿದ್ದೇನೆಂದರೆ ಅಲ್ಲಾಹನ ಆಣೆ!! ಹಝ್ರತ್ ಖುಬೈಬ್(ರ) ತಮ್ಮ ಸೇಡು ತೀರಿಸಿಕೊಂಡರೆ. ಈಗ ನನ್ನ ಮಗು ಅವನೊಂದಿಗಿದ್ದಾನೆ. ಕ್ಷೌರಕತ್ತಿಯು ಕೂಡ ಅವರ ಕೈಯಲ್ಲಿದೆ ಮತ್ತು ಅವರು ಸೇಡು ತೀರಿಸಿಕೊಳ್ಳುತ್ತಾರೆ. ನಾನು ಇದೇನು ಮಾಡಿದ್ದು! ನಾನು ಈ ಮಗುವಿನ ಕೈಗೆ ಕತ್ತಿ ಕಳುಹಿಸಿದ್ದೇನೆ. ಖುಬೈಬ್ ಮಗುವನ್ನು ಕತ್ತಿಯಿಂದ ಕೊಲ್ಲುತ್ತಾರೆ ಮತ್ತು ಪುರುಷನ ಬದಲಿಗೆ ಪುರುಷ ಎಂದು ಹೇಳುತ್ತಾರೆ. ನಾನು ಸೇಡು ತೀರಿಸಿಕೊಂಡೆ. ತದನಂತರ ನನ್ನ ಮಗು ಕತ್ತಿಯನ್ನು ಹಿಡಿದು ಅವರ ಬಳಿ ಹೋದಾಗ ಅವರು ಅದನ್ನು ತೆಗೆದುಕೊಂಡು ಮಗುವಿಗೆ ನೀನು ತುಂಬಾ ಧೈರ್ಯಶಾಲಿ ಎಂದು ತಮಾಷೆಯಾಗಿ ಹೇಳಿದರು. ನೀವೆಲ್ಲರು ನನ್ನನ್ನು ವಧಿಸಲು ತೀರ್ಮಾನ ಮಾಡಿದ್ದರೂ ಸಹ ನಿನ್ನ ಕೈಯಿಂದ ನನಗೆ ಕ್ಷೌರಕತ್ತಿ ನೀಡಿ ಕಳುಹಿಸಿದ್ದಾರೆ ನಿನ್ನ ತಾಯಿ ನನ್ನ ದ್ರೋಹಕ್ಕೆ ಹೆದರಲಿಲ್ಲವೇ? ಹಝ್ರತ್ ಮಾವಿಯ್ಯ ಹೇಳುತ್ತಾರೆ: ಖುಬೈಬ್ ಅವರ ಈ ಮಾತುಗಳನ್ನು ನಾನು ಕೇಳುತ್ತಿದ್ದೆ. ನಾನು ಹೇಳಿದೆ ಎಲೈ ಖುಬೈಬ್! ಅಲ್ಲಾಹನ ಅಭಯದ ಕಾರಣದಿಂದ ನಾನು ನಿಮಗೆ ಭಯಪಡಲಿಲ್ಲ ಮತ್ತು ನಾನು ನಿಮ್ಮ ದೇವರನ್ನು ನಂಬಿ ಈ ಮಗುವಿನ ಕೈಯಲ್ಲಿ ಕತ್ತಿಯನ್ನು ನಿಮಗೆ ಕಳುಹಿಸಿದೆ. ನೀನು ನನ್ನ ಮಗನನ್ನು ಅದರೊಂದಿಗೆ ಕೊಲ್ಲಬೇಕೆಂದು ನಾನು ಅದನ್ನು ಕಳುಹಿಸಲಿಲ್ಲ. ಹಝ್ರತ್ ಖುಬೈಬ್(ರ) ಹೇಳಿದರು: ನಾನು ಅವನನ್ನು ಕೊಲ್ಲಲು ಇಷ್ಟಪಡುವುದಿಲ್ಲ. ನಮ್ಮ ಧರ್ಮದಲ್ಲಿ ದ್ರೋಹವನ್ನು ನಾವು ಅನುಮತಿಸುವುದಿಲ್ಲ ಎಂದು

ಪರಿಗಣಿಸುವುದಿಲ್ಲ. ನಾಳೆ ಬೆಳಿಗ್ಗೆ ಜನರು ನಿನ್ನನ್ನು ವಧಿಸುತ್ತಾರೆ ಎಂದು ನಾನು ಖುಬೈಬ್‌ಗೆ ತಿಳಿಸಿದ್ದೇನೆ ಎಂದು ಅವರು ಹೇಳುತ್ತಾರೆ. ನಂತರ ಮರುದಿನ ಜನರು ಅವರನ್ನು ಸರಪಳಿಯಲ್ಲಿ ತನ್‌ಈಮ್‌ಗೆ ಕರೆದೊಯ್ದರು ಮತ್ತು ಹೇಳಿದಂತೆ ಅದು ಮಕ್ಕಾದ ಸಮೀಪ ಸುಮಾರು ಮೂರು ಮೈಲುಗಳಷ್ಟು ಸ್ಥಳವಾಗಿತ್ತು. ಮಕ್ಕಳು, ಮಹಿಳೆಯರು, ಗುಲಾಮರು ಮತ್ತು ಮಕ್ಕಾದ ಅನೇಕ ಜನರು ಖುಬೈಬ್‌ರ ಹತ್ಯೆಯ ತಮಾಷೆನ್ನು ವೀಕ್ಷಿಸಲು ಅಲ್ಲಿಗೆ ಬಂದರು. ಮಕ್ಕಾದಲ್ಲಿ ಯಾರೂ ಉಳಿಯಲಿಲ್ಲ. ಸೇಡು ತೀರಿಸಿಕೊಳ್ಳಲು ಬಯಸುವ ಎಲ್ಲರೂ ಅವರನ್ನು ನೋಡಲು ಹೋದರು. ಸೇಡು ತೀರಿಸಿಕೊಳ್ಳಲು ಬಯಸಿದವರು ಕಣ್ಣಿಗೆ ತಣ್ಣೀರೆರಚಲು ಹೋದರು ಮತ್ತು ಸೇಡು ತೀರಿಸಿಕೊಳ್ಳಲು ಇಷ್ಟಪಡದವರು ಮತ್ತು ಇಸ್ಲಾಂ ಮತ್ತು ಮುಸ್ಲಿಮರ ವಿರುದ್ಧ ಇರುವವರು ತಮ್ಮ ವಿರೋಧವನ್ನು ವ್ಯಕ್ತಪಡಿಸಲು ಮತ್ತು ಅವರನ್ನು ಹೇಗೆ ವಧಿಸಲಾಗುತ್ತದೆ ಎಂದು ನೋಡಲು ಬಹಳ ಸಂತೋಷದಿಂದ ಅಲ್ಲಿಗೆ ಹೋದರು. ನಂತರ ಹಝ್ರತ್ ಖುಬೈಬ್(ರ) ಅವರನ್ನು ಝೈದ್ ಬಿನ್ ದಸಿನಾ(ರ) ಅವರನ್ನು ತನ್‌ಈಗೆ ಕರೆದೊಯ್ದಾಗ, ಅವಿಶ್ವಾಸಿಗಳ ಆದೇಶದಂತೆ ಉದ್ದವಾದ ಮರವನ್ನು ಅಗೆಯಲಾಯಿತು. ನಂತರ ಅವರು ಖುಬೈಬ್ ಅನ್ನು ಅಲ್ಲಿ ನಿರ್ಮಿಸಿದ ಮರಕ್ಕೆ ತಂದಾಗ. ಹಝ್ರತ್ ಖುಬೈಬ್(ರ) ಹೇಳಿದರು: ನನಗೆ ಎರಡು ರಕತ್ ನಮಾಝ್ ನಿರ್ವಹಿಸಲು ಸಮಯವಿದೆಯೇ? ಜನರು ಹೌದು ಎಂದು ಹೇಳಿದರು. ಹಝ್ರತ್ ಖುಬೈಬ್(ರ) ರವರು ಎರಡು ನಫ್ಲ್‌ಗಳನ್ನು ಸಂಕ್ಷಿಪ್ತವಾಗಿ ನಿರ್ವಹಿಸಿದರು ಮತ್ತು ಅವುಗಳನ್ನು ದೀರ್ಘಗೊಳಿಸಲಿಲ್ಲ.
(ಅತ್ತಬಖಾತುಲ್ ಕುಬ್ರ, ಭಾಗ–8, ಪುಟ–399, ದಾರ್ ಅಹ್ಯಾಉತ್ತುರಾಸುಲ್ ಅರಬಿ, ಬೈರುತ್) (ಸಹೀಹ್ ಬುಖಾರಿ, ಕಿತಾಬುಲ್ ಜಿಹಾದ್ ವಸ್ಸೈರ್, ಅಧ್ಯಾಯ ಹಲ್ ಯಸ್ತಸಿರ್ ಅಲ್–ಅರ್ಗಲ್ ವಾ ಮಿನ್ ಲಾಮ್ ಯಸ್ತಸಿರ್... ಹದೀಸ್–3045) (ಅಸದುಲ್ ಗಾಬಾ, ಸಂಪುಟ–1, ಪುಟ–683, ದಾರುಲ್ ಕುತುಬ್ ಇಮ್‌ಲಿಯಾ ಬೈರುತ್ 2003)

ನಾನು ಹೇಳಿದಂತೆ, ಸಾವನ್ನು ತಪ್ಪಿಸಲು ನಾನು ದೀರ್ಘವಾಗಿ ನಮಾಝನ್ನು ನಿರ್ವಹಿಸುತ್ತಿದ್ದೇನೆ ಎಂದು ಅವರು ಭಾವಿಸದಿರುವಂತೆ ಅದನ್ನು ದೀರ್ಘಗೊಳಿಸಲಿಲ್ಲ ಬಹಳ ಸಂಕ್ಷಿಪ್ತವಾಗಿ ನಮಾಝ್ ನಿರ್ವಹಿಸಿದರು. ಇಬ್ನ್ ಸಾದ್ ಅವರ ಉಲ್ಲೇಖ ಈಗ ಹೇಳಲಾದ ವರದಿಯ ಪ್ರಕಾರ, ಮಾವಿಯ್ಯಾ ಅವರು ಹುಜೈರ್ ಬಿನ್ ಅಬು ಇಹಾಬ್ ಅವರ ಮುಕ್ತ ದಾಸಿಯಾಗಿದ್ದರು, ಅವರ ಮನೆಯಲ್ಲಿ ಹಝ್ರತ್ ಖುಬೈಬ್(ರ) ಅವರನ್ನು ಬಂಧಿಸಲಾಗಿತ್ತು. ಅಲ್ಲಾಮಾ ಇಬ್ನ್ ಅಬ್ದ್ ಅಲ್–ಬರ್ರಾ ಪ್ರಕಾರ, ಹಝ್ರತ್ ಖುಬೈಬ್(ರ) ಅವರನ್ನು ಉಕ್ಬಾನ ಮನೆಯಲ್ಲಿ ಬಂಧಿಸಲಾಗಿತ್ತು ಮತ್ತು ಉಕ್ಬಾನ ಪತ್ನಿ ಅವರಿಗೆ ಆಹಾರವನ್ನು ಒದಗಿಸುತ್ತಿದ್ದಳು ಮತ್ತು ಊಟದ ಸಮಯದಲ್ಲಿ ಅವರನ್ನು ಬಂಧನದಿಂದ ತೆರೆಯುತ್ತಿದ್ದಳು. (ಅಲ್–ಇಸ್ತಿಯಾಬ್, ಭಾಗ–2, ಪುಟ–442, ದಾರುಲ್ ಜೀಲ್, ಬೈರುತ್, 1992)

ಆದಾಗ್ಯೂ, ಇದು ಮರಣ ಭಯವಿಲ್ಲದ ಆ ಸಹಾಬಿಯರ ಸ್ಥಿತಿಯಾಗಿತ್ತು ಮತ್ತು ಅವರ ತ್ಯಾಗಗಳಾಗಿದ್ದುವು. ಆ ಸಹಾಬಿಯರು ಇಸ್ಲಾಮಿಗಾಗಿ ಜೀವ ತ್ಯಾಗ ಮಾಡಲು ಸದಾ ತಯಾರಾಗಿರುವವರು ಆಗಿದ್ದರು. ಈ ಸರಿಯದ ಪ್ರಸ್ತಾಪ ಮುಂದುವರೆಯುವುದು. ಇನ್‌ಶಾ ಅಲ್ಲಾಹ್. **(ಅಲ್–ಫಝುಲ್ ಇಂಟರ್‌ನ್ಯಾಶನಲ್ ಡೈಲಿ, ಜೂನ್ 7, 2024, ಪುಟ 2 ರಿಂದ 6)**

***(ಪುಟ ಸಂಖ್ಯೆ 01ರ ಉಳಿದ ಭಾಗ)***

ಎಂಬುದರ ವ್ಯಾಖ್ಯಾನದಲ್ಲಿ ಹೇಳುತ್ತಾರೆ:

ಈ ಆಯತ್‌ಗಳಲ್ಲಿ, ಮುಸ್ಲಿಮರಿಗೆ ಮುಂಬರುವ ಅಪಾಯಕಾರಿ ತೊಂದರೆಗಳನ್ನು ಎದುರಿಸಲು ಸಿದ್ಧಗೊಳಿಸಲಾಗಿದೆ. ಒಂದು ಕಡೆ, ಹಿಜ್ರತ್‌ನ ನಂತರ, ಹೊರನೋಟಕ್ಕೆ ಆರಾಧಕವಾಗಿರುವ ಸಮೂದಾಯಗಳೊಂದಿಗೆ ಪೈಪೋಟಿ ನಡೆಯುತ್ತಿತ್ತು ಮತ್ತು ಮುಸ್ಲಿಮರ ಸೋಮಾರಿತನವು ಅವರಿಗೆ ಆಕ್ಷೇಪಿಸಲು ಅವಕಾಶವನ್ನು ನೀಡಬಹುದಿತ್ತು. ಮತ್ತೊಂದೆಡೆ, ಮುಸ್ಲಿಮರಿಗೆ ಶೀಘ್ರದಲ್ಲೇ ವಿಜಯಗಳನ್ನು ಲಭಿಸುತ್ತಿತ್ತು. ಇದು ಅವರನ್ನು ಆರಾಧನೆಯಲ್ಲಿ ಸೋಮಾರಿಗೊಳಿಸಲಾಗುತ್ತಿತ್ತು. ಹೀಗಾಗಿ ಇವೆರಡನ್ನೂ ಗಮನದಲ್ಲಿಟ್ಟುಕೊಂಡು ಇಸ್ಲಾಂ ಧರ್ಮವನ್ನು ಶತ್ರುಗಳ ಅಪಹಾಸ್ಯಕ್ಕೆ ಗುರಿಪಡಿಸಬೇಡಿ ಮತ್ತು ಸೋಮಾರಿಯಾಗಬೇಡಿ ಮತ್ತು ಸರ್ವಶಕ್ತನಾದ ಅಲ್ಲಾಹನ ಅನುಗ್ರಹಗಳನ್ನು ಕಳೆದುಕೊಳ್ಳಬೇಡಿ ಎಂದು ಮುಸ್ಲಿಮರಿಗೆ ಎಚ್ಚರಿಕೆ ನೀಡಲಾಗಿದೆ.

ಈ ಆಯತ್‌ನಲ್ಲಿ, ಐದು ನಮಾಝ್‌ಗಳ ಸಮಯವನ್ನು ಉಲ್ಲೇಖಿಸಲಾಗಿದೆ. **ದುಲೂಕ್** ನಲ್ಲಿ ಮೂರು ಅರ್ಥಗಳಿವೆ ಮತ್ತು ಪ್ರತಿಯೊಂದು ಅರ್ಥದ ಪ್ರಕಾರ, ಒಂದೊಂದು ನಮಾಝ್‌ನ ಸಮಯವನ್ನು ವ್ಯಕ್ತಪಡಿಸಲಾಗಿದೆ.

(1) **ಮಾಲತ್ ವಝೂಲತ್ ಅನ್ ಕಬ್ದಿಸ್ಸಮಾಇ** ಅಂದರೆ, ಝವಾಲ್ ಅನ್ನು ದುಲೂಕ್ ಎಂದು ಕರೆಯಲಾಗುತ್ತದೆ, ಇದರಲ್ಲಿ ಝುಹರ್ ನಮಾಝ್‌ನ ಬಂದಿತು (2) **ಇಸ್ಫರ್ರತ್**, ಸೂರ್ಯನು ಹಳದಿ ಬಣ್ಣಕ್ಕೆ ತಿರುಗಿದಾಗ ಅದನ್ನು ಸಹ ದುಲೂಕ್ ಎಂದೂ ಕರೆಯುತ್ತಾರೆ, ಅದರಲ್ಲಿ ಅಸರ್ ಪ್ರಾರ್ಥನೆಯ ಸಮಯವನ್ನು ಹೇಳಲಾಗಿದೆ (3) ಮೂರನೆಯ ಅರ್ಥ **ಘರಬತ್** ಅಂದರೆ ಅದು ಸೂರ್ಯಾಸ್ತದ ಸಮಯವಾಗಿದೆ, ಇದರಲ್ಲಿ ಮಗ್ರಿಬ್ ನಮಾಝ್‌ನ ಸಮಯವನ್ನು ಅದರಲ್ಲಿ ಹೇಳಲಾಗಿದೆ (4) **ಘಸಕಿಲ್ಲೈಲಿ** ಎಂದರೆ **ಝುಲ್‌ಮತು ಅವ್ವಲಿಲ್ಲೈಲಿ** ಎಂದಾಗಿದೆ ಅಂದರೆ ರಾತ್ರಿಯ ಮೊದಲ ಭಾಗದ ಕತ್ತಲೆ, ಇದರಲ್ಲಿ ಇಶಾ ನಮಝ್‌ನ ಸಮಯವನ್ನು ನಿಗದಿಪಡಿಸಲಾಗಿದೆ (5) **ಖುರ್‌ಆನಲ್ ಫಜ್ರ** ಎಂದು ಹೇಳುವ ಮೂಲಕ ಬೆಳಗಿನ ನಮಾಝ್‌ನ ಬಗ್ಗೆ ಹೇಳಲಾಗಿದೆ, ಇದರ ಹೊರತಾಗಿ ಬೇರೆ ಯಾವುದೇ ಗ್ರಂಥದ ಪಠಣವನ್ನು ಕಡ್ಡಾಯವಲ್ಲ.

**ಇನ್ನ ಖುರ್‌ಆನಲ್ ಫಜ್ರ ಕಾನ ಮಶ್‌ಹೂದ–** ಅಂದರೆ: ಖಂಡಿತವಾಗಿಯೂ ಪ್ರಭಾತಕಾಲದ ಖುರ್‌ಆನ್ ಪಾರಾಯಣ (ಅಲ್ಲಾಹನ ಸನ್ನಿಧಿಯಲ್ಲಿ ವಿಶೇಷವಾಗಿ) ಸ್ವೀಕರಿಸಲ್ಪಡುತ್ತದೆ. ಬೆಳಗಿನ ಪ್ರಾರ್ಥನೆಯ ಸಮಯದಲ್ಲಿ ಹಗಲಿನ ದೇವದೂರತರುಗಳು ಬರುತ್ತಾರೆ ಮತ್ತು ರಾತ್ರಿಯ ದೇವದೂತರು ಹೊರಡುತ್ತಾರೆ ಎಂದು ಹಝ್ರತ್ ಪೈಗಂಬರ್(ಸ)ರವರು ಹೇಳಿರುವುದಾಗಿ ಹದೀಸ್‌ಗಳಲ್ಲಿ ಉಲ್ಲೇಖಿಸಲಾಗಿದೆ. ಆ ದೇವದೂತರುಗಳು ಅಲ್ಲಾಹನ ಬಳಿಗೆ ಹೋದಾಗ, ಅವರು ವಿಚಾರಣೆಯಲ್ಲಿ ಹೇಳುತ್ತಾರೆ, ನಾವು ಜಗತ್ತಿಗೆ ಹೋದಾಗ, ನಿಮ್ಮ ದಾಸರೆಲ್ಲರು ನವಾಝ್ ನಿರ್ವಹಿವುದನ್ನು ನಾವು ನೋಡಿದ್ದೇವೆ ಮತ್ತು ಅವರು ಹಿಂದಿರುಗಿದಾಗ ಅವರು ನಮಾಝ್ ಅನ್ನು ನಿರ್ವಹಿಸುವ ಸ್ಥಿತಿಯಲ್ಲೇ ಅವರನ್ನು ಬಿಟ್ಟು ಬಂದಿದೆವು. **ಅನ್ ಅಬೀ ಹುರೈರತ ಅನಿನ್ನಬಿಯ್ಯಿ ಸಲ್ಲಲ್ಲಾಹು ಅಲೈಹಿವ ಸಲ್ಲಮ ಖಾಲ ತಷ್‌ಹದುಹು ಮಲಾಇಕತುಲ್ಲೈಲಿ ವ ಮಲಾಇಕತುನ್ನಹಾರಿ** (ಅಲ್‌ಹದೀಸ್) ಇದರ ಅರ್ಥವೇನೆಂದರೆ ಬೆಳಗಿನ ನಮಾಝನ್ನು ವಿಶೇಷವಾಗಿ ಸರ್ವಶಕ್ತನಾದ ಅಲ್ಲಾಹನ ಮುಂದೆ ಪ್ರಸ್ತುತಪಡಿಸಲಾಗುತ್ತದೆ. ಮತ್ತು ವಿಶೇಷವಾಗಿ ಜನಪ್ರಿಯವಾಗುತ್ತದೆ ಏಕೆಂದರೆ ಆ ಸಮಯದಲ್ಲಿ ಒಬ್ಬ ವ್ಯಕ್ತಿಯು ಸಿಹಿ ನಿದ್ರೆಯಿಂದ ಎಚ್ಚರಗೊಳ್ಳುತ್ತಾನೆ. ಬೆಳಗಿನ ನಮಾಝ್ ವಾಸ್ತವವಾಗಿ ಸಾಮಾನ್ಯ ಮುಸ್ಲಿಮರದ್ದು ತಹಜ್ಜುದ್ ನಮಝ್ ಆಗಿರುತ್ತದೆ. ನಿಸ್ಸಂದೇಹವಾಗಿ, ಬೆಳಗಿನ ನಮಾಝ್ ನಿರ್ವಹಿಸುವ ವ್ಯಕ್ತಿಯು ಆ ನಮಾಝನ್ನು ಪ್ರಾಮಾಣಿಕವಾಗಿ ನಿರ್ವಹಿಸಿದರೆ, ಉಳಿದ ಎಲ್ಲಾ ನಮಾಝ್‌ಗಳು ಸಹ ನಿರ್ವಹಿಸುವುದು ಆತನಿಗೆ ಸುಲಭವಾಗುತ್ತವೆ.

**(ತಫ್ಸೀರ್ ಕಬೀರ್, ಸಂಪುಟ–4, ಪುಟ–373, ಮುದ್ರಣ 2010 ಖಾದಿಯಾನ್)**

## ಅನ್ಯ ಗೋತ್ರಗಳೊಂದಿಗೆ ವಿವಾಹ

**ಹಝ್ರತ್ ಮಸೀಹ್ ಮೌಊದ್ ಅಲೂಹಿಸ್ಸಲಾಮ್ ಹೇಳುತ್ತಾರೆ:–**

"ನಮ್ಮ ಸಮುದಾಯದಲ್ಲಿ ಕಂಡುಬರುತ್ತಿರುವ ಒಂದು ಕೆಟ್ಟ ಸಂಪ್ರದಾಯವೇನೆಂದರೆ, ನಮ್ಮೊಳಗಿರುವ ಇತರ ಗೋತ್ರಗಳಿಗೆ ಹೆಣ್ಣು ಕೊಡಲು ಹಾಗೂ ಪಡೆದುಕೊಳ್ಳಲು ಇಷ್ಟಪಡುವುದಿಲ್ಲ. ಇದು ಅಹಂಕಾರ ಮತ್ತು ಮತ್ಸರದಿಂದಾಗಿದೆ. ಇದು ಶರೀಅತ್ತಿಗೆ ಅಪ್ಪಟ ವಿರುದ್ಧವೂ ಆಗಿರುತ್ತದೆ. ಎಲ್ಲಾ ಆದಮ್ ಸಂತತಿಗಳು ಏಕದೇವನ ದಾಸರಾಗಿದ್ದಾರೆ. ಹೆಣ್ಣು ಕೊಡುವ ಪಡೆಯುವ ವಿಷಯದಲ್ಲಿ ಗಮನಿಸಬೇಕಾದ ವಿಷಯವೇನೆಂದರೆ ಅವರು ಭಯಭಕ್ತಿ ಹಾಗೂ ಉತ್ತಮ ನಡತೆ ಹೊಂದಿರುವವರಾಗಿರಬೇಕು ಮತ್ತು ಅವರು ಯಾವುದೇ ರೀತಿಯ ಪಿತೂರಿಗೆ ಕಾರಣರಾಗಿರಬಾರದು.

ನೆನಪಿಡಿರಿ! ಇಸ್ಲಾಮಿನಲ್ಲಿ ಕುಲ, ಗೋತ್ರಗಳ ಕುರಿತು ಯಾವುದೇ ತಾರತಮ್ಯವಿಲ್ಲ. ಕೇವಲ ಭಯಭಕ್ತಿ ಮತ್ತು ಸಾತ್ವಿಕತೆಯೇ ಪ್ರಧಾನವಾಗಿದೆ. ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳಿದನು: **ಇನ್ನ ಅಕ್ರಮಕುಮ್ ಇಂದಲ್ಲಾಹಿ ಅತ್‌ಖಾಕುಮ್** (ಅಲ್‌ಹುಜರಾತ್:14) ಅಂದರೆ: ನಿಮ್ಮ ಪೈಕಿ ಹೆಚ್ಚು ಸಾತ್ವಿಕನಾರೋ ಖಂಡಿತವಾಗಿಯೂ ಆತನೇ ಅಲ್ಲಾಹನ ದೃಷ್ಟಿಯಲ್ಲಿ ಅತ್ಯಂತ ಗೌರವಾರ್ಹನು." (ಮಲ್ಫೂಝಾತ್ ಸಂಪುಟ–5, ಪುಟ–48–49, ಮುದ್ರಣ ಖಾದಿಯಾನ್ 2003) **(ನಝಾರತ್ ಇಸ್ಲಾಹ್–ವ–ಇರ್‌ಶಾದ್ (ಮರ್ಕಝಿಯಾ, ಖಾದಿಯಾನ್)**

**ಇನ್ಸಾನಿಯತ್ ಝಿಂದಾಬಾದ್, ಮಾನವೀಯತೆ ಚಿರಕಾಲ ಬಾಳಲಿ**

**Love for All, Hatred for None**

**ಕನಿಷ್ಠ ಐದು ದೈನಂದಿನ ನಮಾಝ್‌ಗಳನ್ನು ಸಲ್ಲಿಸಬೇಕು ಮತ್ತು ಅವಕಾಶವಿರುವವರು ಜಮಾಅತ್ತಿನೊಂದಿಗೆ ನಮಾಝ್ ನಿರ್ವಹಿಸಲು ಪ್ರಯತ್ನಿಸಬೇಕು**

**ಪವಿತ್ರ ಖುರ್‌ಆನ್ ಓದುವ ಮತ್ತು ಪಠಿಸುವ ಅಭ್ಯಾಸವನ್ನು ಪಡೆಯಿರಿ, ನೀವು ನಮಾಝ್ ಮತ್ತು ಖುರ್‌ಆನ್‌ಗೆ ಗಮನ ಕೊಡುತ್ತಿದ್ದೀರಾ ಅಥವಾ ಇಲ್ಲವೇ ಎಂಬುದನ್ನು ಪರಿಶೀಲಿಸಿಕೊಳ್ಳಿ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಉಲ್ಲೇಖಗಳು ಇತ್ಯಾದಿಗಳನ್ನು ಒಳಗೊಂಡ ದರ್ಸ್‌ಗಳನ್ನು ಆಯೋಜಿಸಿ. ದೇಶಾದ್ಯಂತ ದೊಡ್ಡ ಪ್ರಮಾಣದಲ್ಲಿ ಮರಗಳನ್ನು ನೆಡುವ ಅಭಿಯಾನವನ್ನು ಪ್ರಾರಂಭಿಸಿ.**

**ಸೈಕಲ್ ಓಡಿಸುವ ಮೂಲಕ ತಮ್ಮ ಆವರಣವನ್ನು ಶುದ್ಧಗೊಳಿಸಿರಿ.**

**ದೀನ್ ಅನ್ನು ಆದ್ಯತೆ ನೀಡುವ ಸಂಬಂಧಗಳು ಉತ್ತೀರ್ಣವಾಗುವುದು, ಯಾರು ಲೌಕಿಕತೆಯನ್ನು ಮುಂದೆ ಇಡುತ್ತಾರೋ ಅವರ ಸಂಬಂಧಗಳಲ್ಲಿ ಅಡಚಣಗಳು ಉಂಟಾಗುವುದು.**

**ಅಲ್ಲಾಹನ ಸಂದೇಶವನ್ನು ತಲುಪಿಸಿರಿ ಮತ್ತು ಅಲ್ಲಾಹನ ಹಕ್ಕುಗಳನ್ನು ಪಾವತಿಸಲು ಮತ್ತು ದಾಸರ ಹಕ್ಕುಗಳನ್ನು ಈಡೇರಿಸಲು ಕಲಿಸಿ.**

## ರಾಷ್ಟ್ರೀಯ ಮಜ್ಲಿಸ್ ಆಮಿಲಾ ಮಜ್ಲಿಸ್ ಅನ್ಸಾರುಲ್ಲಾ ಆಸ್ಟ್ರೇಲಿಯಾದ ಸದಸ್ಯರಿಗೆ ಹಝ್ರತ್ ಅಮೀರುಲ್ ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಸಲಹೆ ಮತ್ತು ಮಾರ್ಗದರ್ಶನ.

ಮಾರ್ಚ್ 6, 2021 ರಂದು, ನ್ಯಾಷನಲ್ ಅಮೀಲಾ ಮಜ್ಲಿಸ್ ಅನ್ಸಾರುಲ್ಲಾ ಆಸ್ಟ್ರೇಲಿಯಾ ಮತ್ತು ಪ್ರಾದೇಶಿಕ ಖಾಯೆದ್‌ರು ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ) ಅವರೊಂದಿಗೆ ಆನ್‌ಲೈನ್‌ನಲ್ಲಿ ಭೇಟಿಯಾಗುವ ಅನುಗ್ರಹವನ್ನು ಹೊಂದಿದ್ದರು. ಹುಝೂರು ಅನ್ವರ್(ಅತಬಿಅ)ರವರು ಈ ಭೇಟಿಯನ್ನು ತಮ್ಮ ಕೇಂದ್ರ ಕಚ್ಚೇರಿಯಾದಂತಃ ಇಸ್ಲಾಮಬಾದ್(ಟಿಲ್‌ಫೋರ್ಡ್)ನಲ್ಲಿ ಆಸೀಸರಾಗಿದ್ದರು ಮತ್ತು ಮಜ್ಲಿಸ್ ಅಮೀಲಾದ ಸದಸ್ಯರು ಸಿಡ್ನಿಯ ಖಿಲಾಫತ್ ಹಾಲ್, ಮಸ್ಜಿದ್ ಬೈತ್ ಅಲ್ ಹುದಾದಿಂದ ಭಾಗವಹಿಸಿದ್ದರು. 65 ನಿಮಿಷಗಳ ಅವಧಿಯ ಈ ಸಭೆಯಲ್ಲಿ, ಆಮಿಲದ ಎಲ್ಲಾ ಸದಸ್ಯರು ತಮ್ಮ ತಮ್ಮ ಇಲಾಖೆಗಳನ್ನು ಉಲ್ಲೇಖಿಸಿ ತಮ್ಮ ಪ್ರಯತ್ನಗಳ ವರದಿಯನ್ನು ಮಂಡಿಸಿದ ನಂತರ ಹುಝೂರ್ ಅನ್ವರ್(ಅತಬಿಅ) ಅವರನ್ನು ಮಾರ್ಗದರ್ಶನ ಮತ್ತು ಸೂಚನೆಗಳನ್ನು ಕೇಳಿದೆ.

ಸಭೆಯ ಆರಂಭದಲ್ಲಿ, ಹುಝೂರ್ ಅನ್ವರ್(ಅತಬಿಅ) ಅವರು ಕೋವಿಡ್‌ನ ಪರಿಸ್ಥಿತಿ ಮತ್ತು ಹಾಜರಿದ್ದವರು ಏಕೆ ಮಾಸ್ಕ್‌ಗಳನ್ನು ಧರಿಸಿಲ್ಲ ಎಂದು ವಿಚಾರಿಸಿದರು. ಈ ಕುರಿತು ಸ್ನೇಹಿತರೊಬ್ಬರು ಹೇಳಿದರು ಹುಝೂರ್ ಆಸ್ಟ್ರೇಲಿಯಾದಲ್ಲಿ, ಕೋವಿಡ್ ಹೆಚ್ಚಿನ ಪ್ರಮಾಣದಲ್ಲಿ ನಿಯಂತ್ರಣಕ್ಕೆ ಬಂದಿದೆ ಮತ್ತು ಅನೇಕ ಸಡಿಲಿಕೆಗಳಿವೆ. ಮತ್ತು ಮುಂದಿನ ಎರಡು ದಿನಗಳಲ್ಲಿ ಹೆಚ್ಚಿನ ನಿರ್ಬಂಧಗಳನ್ನು ತೆಗೆದುಹಾಕಲು ಯೋಚಿಸುತ್ತಿದ್ದಾರೆ. ಆದ್ದರಿಂದಲೇ ಮಾಸ್ಕ್ ಧರಿಸಿರಲಿಲ್ಲ. ತದನಂತರ ಹುಝೂರ್ ಅನ್ವರ್(ಅತಬಿಅ) ದುಆ ನಿರ್ವಹಿಸಿದರು.

ಸಭೆಯಲ್ಲಿ, ಹುಝೂರ್ ಅನ್ವರ್(ಅತಬಿಅ) ಅವರು ಮಜ್ಲಿಸ್ ಅನ್ಸಾರ್‌ಉಲ್ಲಾಹನ ಸದಸ್ಯರನ್ನು ಐದು ಸೈನಂದಿನ ನಮಾಝ್‌ಗಳನ್ನು ನಿರ್ವಹಿಸುವಂತೆ ಒತ್ತಾಯಿಸಿದರು. ಅನ್ಸಾರ್‌ಗಳು ತಮ್ಮ ಪರಲೋಕದ ಬಗ್ಗೆ ಕಾಳಜಿ ವಹಿಸಬೇಕು ಮತ್ತು ಇಲ್ಲಿ ನಮಾಝ್ ನಿರ್ವಹಿಸುವವರ ಸಂಖ್ಯೆ 100% ಇರಬೇಕು ಎಂದು ಹುಝೂರ್ ಅನ್ವರ್(ಅತಬಿಅ) ಹೇಳಿದರು. ಅನ್ಸಾರ್‌ಗಳು ಏನು ಹೇಳುತ್ತಾರೆ, ಅನ್ಸಾರ್‌ಗಳು ವಯಸ್ಸಾಗುತ್ತಿದ್ದಾರೆ ಆದ್ದರಿಂದ ಅವರು ಹೆಚ್ಚು ಕಾಳಜಿ ವಹಿಸಬೇಕು. ಕವಿಯೊಬ್ಬ ಹೇಳಿದ:

“ವಖ್ತ್‌ಕಾ ಪಂಛಿ ಉಡ್ತಾ ಜಾಯೆ, ಉಮರ್ ಕಾ ಸಾಯ ಘಟ್ತಾ ಜಾಯೆ”

(ಅಂದರೆ: ಸಮಯದ ಪಕ್ಷಿಯು ಹಾರುತ್ತದೆ, ಬಾಳಿನ ನೆರಳು ಕಡಿಮೆಯಾಗುತ್ತಿದೆ)

ಆದ್ದರಿಂದ, ನೀವು ಅದರ ಬಗ್ಗೆ ಯೋಚಿಸಿದರೆ, ನೀವು ಚಿಂತಿಸಬೇಕಾಗಿದೆ. ಆದ್ದರಿಂದ, ನಿಮ್ಮ ಅನ್ಸಾರ್‌ಗಳಿಗೆ ದಿನಕ್ಕೆ ಕನಿಷ್ಠ ಐದು ಬಾರಿ ನಮಾಝನ್ನು ನಿರ್ವಹಿಸಲು ಹೇಳಿ ಮತ್ತು ಅವಕಾಶವಿರುವವರು ಜಮಾಅತ್ತಿನೊಂದಿಗೆ ನಮಾಝ್ ನಿರ್ವಹಿಸಲು ಪ್ರಯತ್ನಿಸಬೇಕು. ಅವರ ನಮಾಝ್ ಸೆಂಟರ್ ಅಥವಾ ಮಸೀದಿ ದೂರದಲ್ಲಿದ್ದರೆ, ಅವರ ಮನೆಗಳಲ್ಲಿ ಬಾಜಮಾಅತ್ ಪ್ರಾರ್ಥನೆಯನ್ನು ಏರ್ಪಡಿಸಿ. ಕನಿಷ್ಠ ಅವರ ಹೆಂಡತಿ ಮತ್ತು ಮಕ್ಕಳು ಪ್ರಾರ್ಥಿಸಿದರೆ ಹೊಸ ಪೀಳಿಗೆಯು ಐದು ಬಾರಿ ಮತ್ತು ಜಮಾಅತ್ತಿನೊಂದಿಗೆ ನಮಾಝ್ ನಿರ್ವಹಿಸಲು ಮುಂದಾಗುತ್ತಾರೆ ಮತ್ತು ನಮಾಝಿನ ಮಹತ್ವವು ಅವರಲ್ಲಿ ಬೆಳೆಯುತ್ತದೆ. ಅದರ ಬಗ್ಗೆ ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸಿ. ಅಂತೆಯೇ, ಪವಿತ್ರ ಖುರ್‌ಆನ್ ಓದುವ ಮತ್ತು ಪಠಿಸುವ ಅಭ್ಯಾಸವನ್ನು ಮಾಡಿ ಮತ್ತು ತಮ್ಮ ಮನೆಗಳಲ್ಲಿ ತಮ್ಮ ಮಕ್ಕಳು ನಮಾಝ್ ಮತ್ತು ಖುರ್‌ಆನ್‌ನ ಬಗ್ಗೆ ಗಮನ ಹರಿಸುತ್ತಿದ್ದಾರೆಯೇ ಎಂದು ಪರಿಶೀಲಿಸುವುದನ್ನು ಅನ್ಸಾರ್‌ಗಳ ಕರ್ತವ್ಯವಾಗಿ ಮಾಡಿ. ಇದು ಅನ್ಸಾರರ ಜವಾಬ್ದಾರಿಯೂ ಆಗಿದೆ. ಅದೇ ರೀತಿಯಲ್ಲಿ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಕೆಲವು ಉಲ್ಲೇಖಗಳನ್ನು ಹೊಂದಿರುವ ಬೋಧನೆ ಇತ್ಯಾದಿಗಳನ್ನು ಮನೆಗಳಲ್ಲಿ ಮಾಡಿದರೆ, ಅದು ತರಬೇತಿಯ ಅಂಶವಾಗುತ್ತದೆ. ನಾವು ದೂರ ಸರಿಯುತ್ತಿದ್ದಂತೆ, ಸಮಯವು ದೂರ ಸರಿಯುತ್ತಿದೆ ಮತ್ತು ಹೊಸ ಪೀಳಿಗೆಯ ಬಗ್ಗೆ ಕಾಳಜಿ ವಹಿಸಲು ತಮ್ಮ ಮಕ್ಕಳನ್ನು ತರಬೇತುಗೊಳಿಸುವ ಜವಾಬ್ದಾರಿಗಳು ಅನ್ಸಾರ್‌ಗಳಿಗೆ ಹೆಚ್ಚುತ್ತಿವೆ. ಅನ್ಸಾರುಲ್ಲಾಹ್ ಈಗ ಹೊಸ ಪೀಳಿಗೆಯ ಬಗ್ಗೆ ಕಾಳಜಿ ವಹಿಸದಿದ್ದರೆ, ಕೆಲವು ವರ್ಷಗಳ ನಂತರ ದೊಡ್ಡ ಸಮಸ್ಯೆ ಉಂಟಾಗುತ್ತದೆ. ನೀವು ಈ ದೇಶಗಳಲ್ಲಿ ಉಳಿದುಕೊಂಡರೆ, ಎಲ್ಲರೂ ಸಂಪೂರ್ಣವಾಗಿ ಲೌಕಿಕರಾಗುತ್ತಾರೆ.

ಸಭೆಯಲ್ಲಿ, ಹುಝೂರ್ ಅನ್ವರ್(ಅತಬಿಅ) ರವರು ಮತ್ತೊಮ್ಮೆ ಪವಿತ್ರ ಖುರ್‌ಆನ್‌ನ ಪಠಣಕ್ಕೆ ಒತ್ತು ನೀಡಿದರು ಮತ್ತು ಅವರ 100% ಅನುಯಾಯಿಗಳಿಗೆ ಪವಿತ್ರ ಖುರ್‌ಆನ್ ಅನ್ನು ಹೇಗೆ ಓದುವುದು ಎಂದು ತಿಳಿದಿದೆಯೇ ಎಂದು ವಿಚಾರಿಸಿದರು. ಅದರ ಮೇಲೆ ಹುಝೂರ್ ಅನ್ವರ್(ಅತಬಿಅ) ಅವರು ಅವರಿಗೆ ಮೂರು ಪರ್ಸೆಂಟ್ ಗೊತ್ತಿಲ್ಲ ಎಂದು ಹೇಳಿದ್ದಾರೆ.

ಹುಝೂರ್ ಅನ್ವರ್(ಅತಬಿಅ) ಹೇಳಿದರು:

ಅವರಿಗೆ ವ್ಯವಸ್ಥೆ ಮಾಡಿರಿ, ಪರವಾಗಿಲ್ಲ. ಅನೇಕ ಹಳೆಯ ಅನ್ಸಾರ್‌ಗಳು ಸಹ ಉತ್ಸಾಹದಿಂದ ಓದುತ್ತಾರೆ. ನಿನ್ನೆಯಷ್ಟೇ ನಾನು ಪ್ರಸ್ತಾಪಿಸಿದ್ದೇನೆ, ನಿಧನ ಹೊಂದಿದ ಓರ್ವ ಘಾನದ ಹಾಫಿಝ್ ಸಾಹಿಬ್, ಬೋಟೆಂಗ್ ಸಾಹಿಬ್, 48 ನೇ ವಯಸ್ಸಿನಲ್ಲಿ, ಅವರು ತಮ್ಮ ಉಚ್ಚಾರಣೆಯನ್ನು ಸುಧಾರಿಸಲು ಖೈದಾ ಮತ್ತು ಪವಿತ್ರ ಖುರ್‌ಆನ್ ಅನ್ನು ಪುನಃ ಕಲಿಯುತ್ತಿದ್ದರು. ಹಾಗಾಗಿ ಅದರಲ್ಲಿ ನಾಚಿಕೆ ಇಲ್ಲ ಇದು ಅಲ್ಲಾಹನ ಮಾತುಗಳಾಗಿವೆ, ಕಲಿಯುವುದರಲ್ಲಿ ತಪ್ಪೇನು. ಪ್ರಯತ್ನವನ್ನು ಸರಿಯಾದ ರೀತಿಯಲ್ಲಿ ಮಾಡಿದರೆ ಯಶಸ್ಸು ಕೂಡ ಸಿಗುತ್ತದೆ. ‘ಪ್ರಯತ್ನಿಸುತ್ತೇನೆ’ ಎಂದಷ್ಟೇ ಹೇಳಬೇಡಿ.

ಹುಝೂರ್ ಅನ್ವರ್(ಅತಬಿಅ) ಅವರು ವಖಾರೆ ಅಮಲ್‌ನ ಕಾರ್ಯದರ್ಶಿ ಅವರಿಗೆ ಸೂಚನೆ ನೀಡಿ, ದೇಶಾದ್ಯಂತ ಗಿಡಗಳನ್ನು ನೆಡುವ ಅಭಿಯಾನವನ್ನು ದೊಡ್ಡ ಮಟ್ಟದಲ್ಲಿ ಆರಂಭಿಸಬೇಕು ಎಂದರು. ಹುಝೂರ್ ಅನ್ವರ್(ಅತಬಿಅ) ಹೇಳಿದರು: ಇತ್ತೀಚಿನ ದಿನಗಳಲ್ಲಿ ಕಾಡ್ಗಿಚ್ಚು ಅನೇಕ ಕಾಡಾನೆಗಳನ್ನು ನಾಶಪಡಿಸಿರುವ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಮರಗಳನ್ನು ನೆಡುವ ಮಹತ್ವವನ್ನು ಹೆಚ್ಚಿಸಿದೆ.

ನಂತರ ಹುಝೂರ್ ಅನ್ವರ್(ಅತಬಿಅ) ಅವರು ಎರಡನೇ ಸಾಲಿನ ಅನ್ಸಾರ್‌ಉಲ್ಲಾಹ್ ಅವರ ವ್ಯಾಯಾಮದ ವರದಿಯನ್ನು ವಿಚಾರಿಸಿದರು, ಎಷ್ಟು ಅನ್ಸಾರ್‌ಗಳು ಸೈಕಲ್ ಬಳಸುತ್ತಾರೆ. ಇದರ ಮೇಲೆ, ಹುಝೂರ್ ಅನ್ವರ್(ಅತಬಿಅ) 97 ಅನ್ಸಾರ್ ಸೈಕಲ್‌ಗಳನ್ನು ಹೊಂದಿದ್ದು, ಅದರಲ್ಲಿ 32 ಅನ್ಸಾರ್ ಎರಡನೇ ಸಾಲು ಮತ್ತು 65 ಮೊದಲ ಸಾಲಿನ ಅನ್ಸಾರ್ ಎಂದು ಸ್ನೇಹಿತರೊಬ್ಬರು ಹೇಳಿದರು. ಮತ್ತು ಅವರು ನಿಯಮಿತವಾಗಿ ಸೈಕಲ್ ಉಪಯೋಗಿಸುತ್ತಾರೆ, ಕೇವಲ ಇರಿಸಿಕೊಳ್ಳಲು ಅಲ್ಲ. ಇನ್ನುಳಿದ ಅನ್ಸಾರ್‌ಗಳೂ ಸೈಕ್ಲಿಂಗ್ ಕಡೆ ಗಮನ ಹರಿಸಬೇಕು ಎಂದು ಹುಝೂರ್

ಅನ್ವರ್(ಅತಬಿಅ) ಹೇಳಿದರು. ಕಡಿಮೆ ದೂರದವರೆಗೆ ಸೈಕಲ್ ಓಡಿಸಿರಿ. ಹೀಗಾಗಿ, ಬೈಸಿಕಲ್ ಬಳಸುವ ಮೂಲಕ, ನಿಮ್ಮ ಪರಿಸರವನ್ನು ಸ್ವಚ್ಛಗೊಳಿಸುವಲ್ಲಿ ಪಾತ್ರವಹಿಸಿರಿ.

ವಿಚ್ಛೇದನದ ಪ್ರಮಾಣ ಹೆಚ್ಚುತ್ತಿದೆ ಎಂದು ಕುಟುಂಬದ ಸಮಸ್ಯೆಗಳ ಬಗ್ಗೆ ಸ್ನೇಹಿತರೊಬ್ಬರು ವಿಚಾರಿಸಿದರು. ಈ ನಿಟ್ಟಿನಲ್ಲಿ ಅನ್ಸಾರುಲ್ಲಾಹ್ ಯಾವ ಪಾತ್ರವನ್ನು ವಹಿಸಬೇಕು?

ಈ ಕುರಿತು ಹುರ್ಝೂರ್ ಅನ್ವರ್(ಅತಬಿಅ) ಹೇಳಿದರು: ವಾಸ್ತವವೇನೆಂದರೆ ಲೌಕಿಕತೆ ಹೆಚ್ಚಿದೆ, ತಾಳ್ಮೆ, ಧೈರ್ಯ ಕಡಿಮೆಯಾಗಿದೆ, ಎರಡೂ ಕಡೆ ತಪ್ಪುಗಳು ನಡೆಯುತ್ತಿವೆ. ಒಂದು ಹುಡುಗಿ, ಒಂದು ಹುಡುಗ ಕೂಡ. ಪ್ರಪಂಚದ ಮೇಲೆ ಧರ್ಮಕ್ಕೆ ಪ್ರಥಮ ಸ್ಥಾನ ನೀಡುವುದಾಗಿ ಅವರು ಪ್ರತಿಜ್ಞೆ ಮಾಡುತ್ತಾರೆ, ಆದರೆ ಪೈಗಂಬರ್(ಸ) ಅವರು ನೀವು ಸಂಬಂಧಗಳನ್ನು ಹೊಂದಿರುವಾಗ, ನಾವು ಇತರ ಲೌಕಿಕ ವಿಷಯಗಳಾದ ಜಗತ್ತು ಅಥವಾ ಸೌಂದರ್ಯಕ್ಕಿಂತ ಧರ್ಮಕ್ಕೆ ಆದ್ಯತೆ ನೀಡಬೇಕು ಎಂದು ಹೇಳಿದ ಮಾತು ಅವರಿಗೆ ನೆನಪಿರುವುದಿಲ್ಲ. ಆದ್ದರಿಂದ ನೀವು ಈ ವಿಷಯಗಳನ್ನು ಗಮನದಲ್ಲಿಟ್ಟುಕೊಂಡರೆ, ನಿಮಗೆ ಸಮಸ್ಯೆಗಳು ಕಡಿಮೆಯಾಗುತ್ತವೆ. ಈ ಭೌತಿಕತೆ ನಮ್ಮ ಅಹ್ಮದಿ ಸಮಾಜದ ಮೇಲೂ ಪರಿಣಾಮ ಬೀರುತ್ತಿದೆ. ಆದ್ದರಿಂದ ಸುಧಾರಣಾ ಸಮಿತಿ (ಇಸ್ಲಾಹಿ ಕಮೀಟಿ) ಮತ್ತು ತರಬೇತಿ ಕಾರ್ಯದರ್ಶಿಯನ್ನು ಜಮಾಅತಿನ ಮಟ್ಟದಲ್ಲಿ, ಲಜ್ನದ ತರಬೇತಿ ಸೆಕ್ರೇಟರಿ, ಖುದ್ದಾಮುಲ್ ಅಹ್ಮದೀಯದ ಮುಹ್ತಮಿಮ್ ತರಬಿಯ್ಯತ್ ಅದೇ ರೀತಿ ಖಾಎದ್ ತರ್‌ಬೀಯ್ಯತ್ ಅನ್ಸಾರುಲ್ಲಾ ಇವರೆಲ್ಲರು ಸೇರಿ ತಮ್ಮ ತಮ್ಮ ಪರಿಸರದಲ್ಲಿ ತರಬೇತಿ ನೀಡುವತ್ತ ಗಮನ ಹರಿಸಬೇಕು. ನಾವು ಲಭಕಿಕತೆಯ ಮೇಲೆ ಧರ್ಮವನ್ನು ಇಡುತ್ತೇವೆ ಎಂದು ನಾವು ವಾಗ್ದಾನ ಮಾಡುತ್ತೇವೆ, ಆದರೆ ನಾವು ಈ ವಾಗ್ದಾನವನ್ನು ಅನುಸರಿಸುವುದಿಲ್ಲ ಆದರೂ ನಾವು ಅದನ್ನು ಉಲ್ಲಂಘಿಸುತ್ತಿದ್ದೇವೆ. ಹೀಗೆ ನಂತರ ಈ ಲೌಕಿಕ ಆಸೆಗಳು ಸಹ ಹೆಚ್ಚಾಗುತ್ತವೆ, ಹುಡುಗಿಯರಲ್ಲಿ ತಾಳ್ಮೆ ಮತ್ತು ಧೈರ್ಯವೂ ಕಡಿಮೆಯಾಗಿದೆ ಮತ್ತು ಹುಡುಗರಲ್ಲಿಯೂ ಸಹ. ನಾನು ಇದನ್ನೂ ನೋಡಿದ್ದೇನೆ. ಆದ್ದರಿಂದ, ಇಸ್ಲಾಂ ಧರ್ಮಕ್ಕೆ ನೀಡಿದ ಆರೋಪದಲ್ಲಿ ಮದುವೆಯನ್ನು ಏರ್ಪಡಿಸುವುದರಿಂದ Arrange marriage ನಲ್ಲಿ ನಮ್ಮ ಸಂಬಂಧಗಳು ಸರಿಯಾಗಿ ಹೊಂದಿಕೆಯಾಗಲಿಲ್ಲ ಎಂದು, ಆದ್ದರಿಂದ ನಮ್ಮ ಸಂಬಂಧಗಳು ಮುರಿದುಹೋಗಿವೆ, ಇದು ಕೂಡ ತಪ್ಪು ಯೋಚನೆಯಾಗಿದೆ. ಅದೇ ಪ್ರವೃತ್ತಿಯು ಇಡೀ ಪ್ರಪಂಚದಲ್ಲಿ ಹೊರಹೊಮ್ಮುತ್ತಿದೆ ಮತ್ತು ಲೌಕಿಕತೆಯ (ಪ್ರವೃತ್ತಿ) ನಮ್ಮ ಸಮಾಜದಲ್ಲಿ (ಸಹ) ಬರುತ್ತಿದೆ, ಆದ್ದರಿಂದ ನಾವು ಕೂಡ ಆಕಾರಗಳು ಎದುರಿಸುತ್ತಿವೆ.

ಒಂದು ವಿಷಯವೇನೆಂದರೆ ಸಂಬಂಧಗಳು ಮುರಿದು ಬೀಳುವುದು ಮತ್ತು ಎರಡನೇಯದು ಹೆಣ್ಣುಮಕ್ಕಳಿಗೆ ಒಳ್ಳೆಯ ಸಂಬಂಧಗಳು ಸಿಗುವುದಿಲ್ಲ, ಕೌಟುಂಬಿಕ ಸಮಸ್ಯೆಗಳಿರುತ್ತವೆ. ನೀವು ಹುಡುಗರನ್ನು ಸರಿಯಾಗಿ ತರಬೇತುಗೊಳಿಸಿದರೆ, ಅನ್ಸಾರ್‌ಗಳು ಸಹ ತಮ್ಮ ಮಕ್ಕಳನ್ನು ಸರಿಯಾಗಿ ತರಬೇತಿ ನೀಡಿದರೆ, ಖುದ್ದಾಮರು ತಮ್ಮ ಸಹೋದರರನ್ನು ಸರಿಯಾಗಿ ತರಬೇತಿ ನೀಡಿದರೆ ಮತ್ತು ಪ್ರವಾದಿ(ಸ) ಹೇಳಿರುವುದನ್ನು ತಿಳಿಸಿದರೆ; ಪ್ರವಾದಿ(ಸ) ಹೇಳಿದರು: "ಧರ್ಮವನ್ನು ಪ್ರಪಂಚದ ಮೇಲೆ ಆದ್ಯತೆ ನೀಡಿ ಮತ್ತು (ಧರ್ಮ)ವನ್ನು ನೋಡಿರಿ ಮತ್ತು ಲಜ್ನ ಸರಿಯಾದ ರೀತಿಯಲ್ಲಿ ತರಬೇತಿ ನೀಡಿದರೆ ಮತ್ತು ಹುಡುಗಿ ಧರ್ಮದ ನಿಷ್ಠೆಯಾಗಿದ್ದರೆ, ಧರ್ಮಕ್ಕೆ ಆದ್ಯತೆ ನೀಡುವ ಸಂಬಂಧಗಳು ಸಹ ಯಶಸ್ವಿಯಾಗುತ್ತವೆ. ಲೌಕಿಕತೆಯನ್ನು ಮುಂದೆ ಇಟ್ಟುಕೊಳ್ಳುವವರು ಅವರಲ್ಲಿಯೂ ಬಿರುಕುಗಳು ಕಾಣಿಸಿಕೊಳ್ಳುತ್ತವೆ. ಇದು ಎಲ್ಲಾ ತರಬೇತಿ ಮತ್ತು ತಿದ್ದುಪಡಿ ಕ್ಷೇತ್ರಗಳ ದೀರ್ಘ ಮತ್ತು ನಿರಂತರ ಪ್ರಕ್ರಿಯೆಯಾಗಿದೆ. ಅದರ ಮೇಲೆ ಪ್ರಯತ್ನಿಸುತ್ತಿರಿ. ಹಾಗಾಗಿ ಅನ್ಸಾರ್‌ಗಳು ತಮ್ಮ ಮನೆಗಳಲ್ಲಿ ಪ್ರಯತ್ನಿಸುತ್ತಲೇ ಇದ್ದರು. ಇದನ್ನು ಜಮಾಅತಿನ ವ್ಯವಸ್ಥೆಗೆ ಬಿಡಬೇಡಿ, ಆದರೆ ಅನ್ಸಾರ್‌ಗಳು ತಮ್ಮ ಮಕ್ಕಳಿಗೆ ತರಬೇತಿ ನೀಡಿ. ದುಆವಿನ ಮೂಲಕ ಸಂಬಂಧಗಳನ್ನು ಮಾಡಬೇಕು, ಹೌದು, ಕೆಲವೊಮ್ಮೆ ಸಮಸ್ಯೆಗಳು ಅದರ ನಂತರ ಉದ್ಭವಿಸುತ್ತವೆ, ಆದರೆ ಅವು ತಾತ್ಕಾಲಿಕವಾಗಿರುತ್ತವೆ. ಸಾಮಾನ್ಯವಾಗಿ, ನಾವು ಸರಿಯಾದ ಪ್ರಯತ್ನವನ್ನು ಮಾಡಿದರೆ ಈ ಸಮಸ್ಯೆಗಳನ್ನು ಕಡಿಮೆ ಮಾಡಬಹುದು.

ಆಗ ಸ್ನೇಹಿತರೊಬ್ಬರು ಕೇಳಿದರು, ಪ್ರೀಯ ಹುರ್ಝೂರ್ ಅನ್ವರ್(ಅತಬಿಅ) ಅವರೇ, ಶಿಕ್ಷೆಯೂ ಪ್ರಪಂಚಕ್ಕೆ ಆವರಿಸಿದರೂ ಪ್ರಪಂಚದ ಗಮನವು ಇಮಾಮ್ ಉಝ್ಝಮಾನ್‌ನ ಕಡೆಗೆ ಸೆಳೆಯುತ್ತಿಲ್ಲ, ಆದರೆ ಸರ್ವಶಕ್ತನಾದ ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೇಳುತ್ತಾನೆ, **ಮಾಕುನ್ನ ಮುಅಝ್ಝಿಬೀನ ಹತ್ತ ನಬ್‌ಅಸ ರಸೂಲ.**

ಇದಕ್ಕೆ ಪ್ರತಿಕ್ರಿಯಿಸಿದ ಹುಝೂರ್ ಅನ್ವರ್(ಅತಬಿಅ) ಹೇಳೀದರು: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ: ನೀವು ಈ ಬಗ್ಗೆ ಗಮನ ಹರಿಸದಿದ್ದರೆ, ಶಿಕ್ಷೆ ಹೆಚ್ಚಾಗುತ್ತದೆ ಮತ್ತು ನೀವು ನಾಶವಾಗುತ್ತೀರಿ ಮತ್ತು ಹಝ್ರತ್ ಮಸೀಹ್ ಮೌಊದ್(ಅ) ಮುಂದೆ ಹೀಗೂ ಹೇಳುತ್ತಾರೆ: ನೀವು ಇಸ್ಲಾಮ್ ಮತ್ತು ಅಹ್ಮದೀಯತ್ತನ್ನು ಸ್ವೀಕರಿಸಬೇಕು ಎಂಬುದು ಅಗತ್ಯವಿಲ್ಲ. ಅದನ್ನು ತಪ್ಪಿಸಲು, ನೀವು ಅಲ್ಲಾಹನ ಹಕ್ಕುಗಳನ್ನು ಮತ್ತು ದಾಸರ ಹಕ್ಕುಗಳನ್ನು ಈಡೇರಿಸಲು ಪ್ರಾರಂಭಿಸಿದರೆ ಮತ್ತು ಅಕ್ಷರಶಃ, ನಿಷ್ಪ್ರಯೋಜಕ ಮತ್ತು ಪಾಪವನ್ನು ತಪ್ಪಿಸಲು ಪ್ರಾರಂಭಿಸಿದರೆ, ಆಗಲೂ ಅಲ್ಲಾಹನ ಕರುಣೆ ಚಲಿಸುತ್ತದೆ ಮತ್ತು ನಿಮ್ಮನ್ನು ರಕ್ಷಿಸಲಾಗುತ್ತದೆ. ಶಿಕ್ಷೆಗಳು ಸಹ ತಪ್ಪಿಸುತ್ತದೆ. ಆದ್ದರಿಂದ ಜಗತ್ತು ಪ್ರಸ್ತುತ ಭೌತವಾದದಲ್ಲಿ ಮುಳುಗಿದೆ, ಇದೆಲ್ಲ ಏಕೆ ನಡೆಯುತ್ತಿದೆ ಎಂದು ಅದು ತಿಳಿದಿರುವುದಿಲ್ಲ. ಇದರ ಹೊರತಾಗಿಯೂ, ನಾವು ಎಚ್ಚರಿಸುತ್ತಲೇ ಇದ್ದೇವೆ ಮತ್ತು ಹಿಂದಿನ ದಿನಗಳಲ್ಲಿ ನಾನು ಪ್ರಪಂಚದ ನಾಯಕರಿಗೆ ಪತ್ರಗಳನ್ನು ಸಹ ಬರೆದಿದ್ದೇನೆ ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಬಗ್ಗೆ ಅವರು ಗಮನ ಹರಿಸದಿದ್ದರೆ ಅಲ್ಲಾಹನ ವಿಪತ್ತುಗಳು ಬರುತ್ತವೆ ಎಂದು ಹೇಳಿದ್ದೇನೆ. ಈಗಲೂ, ಕೋವಿಡ್ ಅಥವಾ ಯಾವುದೇ ಸುನಾಮಿ ಅಥವಾ ಚಂಡಮಾರುತ ಅಥವಾ ಭೂಕಂಪದ ವಿಷಯಕ್ಕೆ ಬಂದಾಗ, ಗಮನ ನೀಡುತ್ತಾರೆ. ಅಲ್ಪಾವಧಿಗೆ ಅಲ್ಲಾಹ್ ಅಲ್ಲಾಹ್ ಎಂದು ಹೇಳುತ್ತಾರೆ. ಅಥವಾ ಅವರ ಧರ್ಮದ ಪ್ರಕಾರ, ಕೆಲವರು ಅಲ್ಲಾಹ್ ಅಲ್ಲಾಹ್ ಎನ್ನುತ್ತಾರೆ, ಕೆಲವರು ರಾಮ್-ರಾಮ್ ಮಾಡುತ್ತಾರೆ, ಕೆಲವರು ತಮ್ಮ ಮಾರ್ಗವನ್ನು ತೆಗೆದುಕೊಳ್ಳುತ್ತಾರೆ, ಆದರೆ ಅವರು ಪರಸ್ಪರ ಮತ್ತು ಅಲ್ಲಾಹನ ಹಕ್ಕುಗಳನ್ನು ಪೂರೈಸಲು ಸುಧಾರಿಸಲು ಪ್ರಯತ್ನಿಸುತ್ತಾರೆ. ಆದರೆ ಅದು ಹಿಂದೆ ಸರಿದಾಗ, ಮತ್ತೆ ಅವರು ತಮ್ಮ ಹಿಂದಿನ ಸ್ಥಿತಿಗೆ ಮರಳುತ್ತಾರೆ. ಅಂತಿಮವಾಗಿ, ನೀವು ನಂಬದಿದ್ದರೆ ಮತ್ತು ಅರ್ಥಮಾಡಿಕೊಳ್ಳದಿದ್ದರೆ ಇದು ಸಂಭವಿಸುತ್ತದೆ, ನಂತರ ನೀವು ನಾಶವಾಗುತ್ತೀರಿ. ಮೊದಲ ಸಮೂದಾಯಗಳು ನಾಶವಾಗಿವೆ ಮತ್ತು ಇನ್ನೂ ನಾಶವಾಗುತ್ತಿವೆ. ಅವರು ಅದೇ ರೀತಿಯಲ್ಲಿ ಕ್ರಮೇಣ ಕಣ್ಮರೆಯಾಗುತ್ತಾರೆ ಮತ್ತು ನೀತಿವಂತರು ತಮ್ಮನ್ನು ತಾವು ಸುಧಾರಿಸಿಕೊಳ್ಳುವುದನ್ನು ಮುಂದುವರಿಸುತ್ತಾರೆ. ಆದರೆ, ನಮ್ಮ ಕೆಲಸ ಎಚ್ಚರಿಸುವುದು, ಸಂದೇಶ ನೀಡುವುದು, ಬೋಧಿಸುವುದು, ಎಲ್ಲರಿಗೂ ತಲುಪುವುದು ಮತ್ತು ಉಳಿದ ಕೆಲಸ ಅಲ್ಲಾಹನದ್ದಾಗಿದೆ. ನಾವು ನಮ್ಮ ಕೆಲಸವನ್ನು ಗಂಭೀರವಾಗಿ ಮಾಡುವುದನ್ನು ಮುಂದುವರಿಸಿದರೆ, ನಮ್ಮ ಕರ್ತವ್ಯಗಳು ಈಡೇರುತ್ತವೆ ಮತ್ತು ಸರ್ವಶಕ್ತನಾದ ಅಲ್ಲಾಹನು ಈ ಜನರಿಗೆ ಮಾರ್ಗದರ್ಶನ ನೀಡಲಿ ಮತ್ತು ವಿನಾಶದಿಂದ ದೇಶಗಳನ್ನು ರಕ್ಷಿಸಲಿ ಎಂದು ನಾವು ಪ್ರಾರ್ಥಿಸುತ್ತೇವೆ. ಇದು ನಮ್ಮ ಕೆಲಸ ಮತ್ತು ಜಗತ್ತು ಇರುವವರೆಗೂ ನಾವು ಇದನ್ನು ಮುಂದುವರಿಸುತ್ತೇವೆ. ಜಗತ್ತನ್ನು ಸುಧಾರಿಸಲು ನಾವು ಒಪ್ಪಂದ ಮಾಡಿಕೊಂಡಿಲ್ಲ. ಹೌದು, ನಾವು ಸ್ವೀಕರಿಸಿದ ಒಪ್ಪಂದವೆಂದರೆ ಅಲ್ಲಾಹನ ಸಂದೇಶವನ್ನು ತಿಳಿಸುವುದು ಮತ್ತು ಅಲ್ಲಾಹನ ಹಕ್ಕುಗಳನ್ನು ಈಡೇರಿಸಲು ಕಲಿಸುವುದು ಮತ್ತು ದಾಸರ ಹಕ್ಕುಗಳನ್ನು ಈಡೇರಿಸಲು ಮತ್ತು ಅವರತ್ತ ಗಮನ ಹರಿಸುವುದು ಮತ್ತು ನಂತರ ಒಟ್ಟಿಗೆ ಪ್ರಾರ್ಥಿಸುವುದು. ನಾವು ಈ ಕರ್ತವ್ಯವನ್ನು ಪೂರೈಸುತ್ತಿದ್ದರೆ, ನಾವು ಅದನ್ನು ವಾಸ್ತವದಲ್ಲಿ ಪೂರೈಸುತ್ತೇವೆ ಮತ್ತು ಅದನ್ನು ಗಂಭೀರವಾಗಿ ಪೂರೈಸುತ್ತೇವೆ, ಆಗ ನಾವು ಮುಕ್ತರಾಗುತ್ತೇವೆ, ಉಳಿದವು ಅಲ್ಲಾಹ್ ಮತ್ತು ಅವನ ದಾಸರ ವಿಷಯವಾಗಿದೆ.

**(ಅಖ್ಬರ್ ಅಲ್-ಫಜಲ್ ಇಂಟರ್ನ್ಯಾಷನಲ್ 27/ಆಗಸ್ಟ್ 2021 ಗೆ ಧನ್ಯವಾದಗಳು)**

## ವಿವಾಹ ಪ್ರಚಾರಪಡಿಸಲು ದಫ್ ಉಪಯೋಗಿಸಬಹುದು ಹೊರತು ಡೋಲು ಬಾರಿಸುತ್ತಾ ಕುಣಿಯುವುದು ನಿಷಿದ್ಧವಾಗಿದೆ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಕೆಟ್ಟ ವಸ್ತುಗಳು ಹರಾಮ್ ಆಗಿದೆ ಮತ್ತು ಶುದ್ಧ ವಸ್ತುಗಳು ಹಲಾಲ್ ಆಗಿದೆ. ಅಲ್ಲಾಹನು ಯಾವುದೇ ಶುದ್ಧ ವಸ್ತುಗಳನ್ನು ನಿಷಿದ್ಧ (ಹರಾಮ್) ಗೊಳಿಸುವುದಿಲ್ಲ. ಬದಲು ಎಲ್ಲ ಶುದ್ಧ ವಸ್ತುಗಳು ಹಲಾಲ್ (ಧರ್ಮಬದ್ಧ) ಎನ್ನುತ್ತದೆ. ಆದರೆ ಶುದ್ಧ ವಸ್ತುಗಳೊಂದಿಗೆ ಅಶುದ್ಧ ವಸ್ತುಗಳನ್ನು ಬೆರಕೆ ಮಾಡಿದರೆ ಅದು ನಿಷಿದ್ಧವಾಗುತ್ತದೆ, ಈಗ ನೋಡಿ ವಿವಾಹವನ್ನು ಪ್ರಚಾರಪಡಿಸಲು ದಫ್ ಬಾರಿಸುವುದನ್ನು ಧರ್ಮಸಮ್ಮತವೆಂದಿದೆ. ಆದರೆ ಅದರಲ್ಲಿ ಡೋಲು ಬಾರಿಸುತ್ತಾ ಕುಣಿಯುವುದು ಇತ್ಯಾದಿ ಸೇರಿಸುವುದನ್ನು ನಿಷಿದ್ಧಗೊಳಿಸಲಾಗಿದೆ. ಆದರೆ ನಬಿ ಕರೀಂ ಸಲ್ಲಲ್ಲಾಹು ಅಲೈಹಿವಸಲ್ಲಮರ ರೀತಿಯನ್ನು ಅನುಸರಿಸಿದರೆ ಯಾವುದೂ ನಿಷಿದ್ಧವಲ್ಲ. **(ಮಲ್‌ಫೂಝಾತ್, ಸಂಪುಟ-5, ಪುಟ-354, ಮುದ್ರಣ ಖಾದಿಯಾನ್ 2003)**

*(ಪುಟ ಸಂಖ್ಯೆ 12ರ ಉಳಿದ ಭಾಗ)*

ಅರಿಯಬಹುದಾಗಿತ್ತು. ಖಲೀಫರು ತಮ್ಮ ಜಮಾಅತಿಗೆ ಅಷ್ಟೇ ಸಂಬೋಧಿಸಲಿಲ್ಲ ಬದಲಿಗೆ ಇಡೀ ಲೋಕಕ್ಕೆ ಮಾರ್ಗದರ್ಶನ ನಿಡಿದರು. ಈ ಮಾತು ನನಗೆ ತುಂಬಾ ಹಿಡಿಸಿತು. ನನಗೆ ಈ ವಿಷಯ ತಿಳಿದು ಆಶ್ಚರ್ಯವಾಯಿತು. ಪವಿತ್ರ ಖುರ್‌ಆನ್ ಕೇವಲ ಮುಸಲ್ಮಾನರಿಗೆ ಅಲ್ಲ, ಬದಲು ಎಲ್ಲಾ ಧರ್ಮಗಳ ಮತ್ತು ಎಲ್ಲಾ ಮಾನವರಿಗೆ ಸುರಕ್ಷತೆಯ ಶಿಕ್ಷಣ ನೀಡುತ್ತದೆ. ಮತ್ತು ಖಲೀಫರು ಹೇಳಿದ ಈ ಮಾತು– "ನಾವೆಲ್ಲರೂ ಸೇರಿ ಶಾಂತಿ ಸ್ಥಾಪನೆಗಾಗಿ ಪ್ರಯತ್ನಿಸಬೇಕಾಗಿದೆ." ಎಂಬುದು ಬಹಳ ಮೆಚ್ಚುಗೆಯಾಯಿತು ಅದಲ್ಲದೆ ಖಲೀಫರು ಮಸೀದಿಯ ಕುರಿತು ಹೇಳಿದ್ದು– ಇದು ಪೇಟೆಯ ಬಳಿ ಇದೆ. ಈಗ ಲೌಕಿಕ ಸಾಮಗ್ರಿಗಳ ಜೊತೆ ಆಧ್ಯಾತ್ಮಿಕ ಲಾಭವು ಪಡೆಯಬಹುದಾಗಿದೆ." ತುಂಬ ಮೆಚ್ಚಿದ್ದೇನೆ. ನನ್ನ ಭಾವನೆ ಆ ಕಡೆ ಹೋಗಿರಲಿಲ್ಲ. ಆದರೆ ಇದು ಬಹಳ ಉತ್ತಮ ಮಾತಾಗಿದೆ. ಏಕೆಂದರೆ ನಿಜವಾಗಿಯೂ ನಾವು ಲೌಕಿಕತೆಯಲ್ಲಿ ಎಷ್ಟೊಂದು ಮುಳುಗಿ ಹೋಗಿದ್ದೇವೆ ಎಂದರೆ ಜೀವನದ ಮುಖ್ಯ ಲಕ್ಷ್ಯದ ಕಡೆಯೇ ನಮ್ಮ ಗಮನವಿರುವುದಿಲ್ಲ. ಇದೀಗ ನಾವು ಮಸೀದಿಗೆ ಬಂದು ಇತ್ತ ಲಕ್ಷ್ಯ ಹರಿಸಬಹುದಾಗಿದೆ.

ಮಹಿಳೆ ಓರ್ವರು Marina Alt ಸಾಹಿಬ ತಮ್ಮ ಭಾವನೆಳನ್ನು ವ್ಯಕ್ತಪಡಿಸುತ್ತಾ ಹೇಳುತ್ತಾರೆ, ಅವರು ಮೊದಲ ಬಾರಿಗೆ ಹುಝೂರ್ ಅನ್ವರ್[ಅತಬಿಅ]ರ ಸಭೆಯಲ್ಲಿ ಬಂದು ಸೇರಿದ್ದರು. ಹೇಳುತ್ತಾರೆ. ನನಗೆ ಇದೆಲ್ಲ ಒಂದು ಹೊಸ ಅನುಭವವಾಗಿತ್ತು. ಇಂತಹ ಅನುಭವ ಎಂದೂ ಆಗಿರಲಿಲ್ಲ. ಇದು ಅತ್ಯಂತ ಒಳ್ಳೆಯ ಮತ್ತು ಸುಂದರ ಅನುಭವವಾಗಿತ್ತು. ಖಲೀಫರ ಮಾತಿನ ಲಹರಿ ಭಾಷಣ ತುಂಬಾ ಮೆಚ್ಚಿದ್ದೇನೆ. ನನಗೆ ಈ ಮಾತು ಬಹಳ ಮೆಚ್ಚುಗೆಯಾಯಿತು. ಖಲೀಫರು ಲೋಕದ ನಿಜಸ್ಥಿತಿಯನ್ನು ಸ್ಪಷ್ಟಪಡಿಸಿದ್ದಲ್ಲದೆ ಶಾಂತಿಯ ಅವಶ್ಯಕತೆಗೆ ಒತ್ತು ನೀಡಿದರು. ಜಮಾಅತ್ ಎಲ್ಲಾ ಸೇವೆಗಳು ಮತ್ತು ಮಸೀದಿ ಇಮಾಣ ಕಾರ್ಯವೆಲ್ಲ ಕೇವಲ ತಮ್ಮ ಚಂದಾ ಮೂಲಕ ಬಂದ ಹಣದಿಂದ ಪೂರೈಸಿಕೊಳ್ಳುತ್ತದೆ ಎಂಬ ವಿಷಯ ತಿಳಿದು ತುಂಬಾ ಆಶ್ಚರ್ಯವಾಯಿತು. ಖಲೀಫರ ಭಾಷಣದಿಂದ ನಾನು ಈ ಸಂದೇಶ ಜೊತೆಗೆ ತೆಗೆದುಕೊಂಡು ಹೋಗುತ್ತೇನೆ. ನಾವೆಲ್ಲರೂ ಪರಸ್ಪರ ಒಳ್ಳೆಯ ವ್ಯವಹಾರ ಮಾಡಬೇಕು, ಇದಕ್ಕಾಗಿ ತುಂಬ ಶ್ರಮವಹಿಸಬೇಕಾಗಿದೆ, ಆಗ ಮಾತ್ರ ಶಾಂತಿ ಸ್ಥಾಪಿಸಬಹುದಾಗಿದೆ. ಖಲೀಫರ ವ್ಯಕ್ತಿತ್ವದಿಂದ ವಿನಯ, ಅನುಕಂಪ ವ್ಯಕ್ತವಾಗುತ್ತದೆ.

viola Rabien ಸಾಹಿಬಾ ಸ್ಥಳೀಯ ಪೌರಸಂಸ್ಥೆಯಲ್ಲಿ ಕಾರ್ಯನಿರತರಾಗಿದ್ದಾರೆ, ಇವರಿಗೆ ಮೊದಲ ಬಾರಿಗೆ ಹುಝೂರರಿಗೆ ಕಾಣುವ ಭಾಗ್ಯ ದೊರೆತಿದೆ, ಹೇಳುತ್ತಾರೆ. ಇಂತಹ ಬೃಹತ್ ಕಾರ್ಯಕ್ರಮ ಎಷ್ಟು ಸುವ್ಯವಸ್ಥಿತವಾಗಿ ನಡೆದಿದೆ, ಇದನ್ನು ಕಂಡು ನಾನು ಆಶ್ಚರ್ಯಚಕಿತನಾಗಿದ್ದೇನೆ, ಜಮಾಅತ್ ಇದಕ್ಕಾಗಿ ತುಂಬ ಶ್ರಮವಹಿಸಿದೆ ಎಂಬುದು ಸ್ಪಷ್ಟವಿದೆ. ಖಲೀಫರು ಬರುತ್ತಿದ್ದಂತೆ ಸಭಾಂಗಣ ಮೌನವಾಗಿಬಿಟ್ಟಿತು. ಇದನ್ನು ಕಂಡು ಆಶ್ಚರ್ಯವಾಯಿತು. ನನಗೆ ಖಲೀಫರ ಈ ಮಾತು ಬಹಳ ಮೆಚ್ಚುಗೆಯಾಯಿತು. ಇಸ್ಲಾಂ ಇತರರಿಗೆ ಹಕ್ಕುಗಳನ್ನು ಪಾಲಿಸಲು ಪ್ರೇರಣೆ ನೀಡುತ್ತದೆ, ಕೇವಲ ತಮ್ಮ ಮನೆಯ ಪಕ್ಕದಲಿಲರುವವರಿಗೆ ಮಾತ್ರ ನೆರೆಯವನ ಪಟ್ಟ ಕಟ್ಟುವುದಿಲ್ಲ. ಬದಲು ತುಂಬಾ ವಿಶಾಲ ರೀತಿಯಲ್ಲಿ ನೆರೆಹೊರೆಯವರ ಹಕ್ಕಗುಳನ್ನು ಇಸ್ಲಾಂ ವಿವರಿಸಿದೆ. ಈ ಮಾತು ನನಗೆ ತುಂಬಾ ಮೆಚ್ಚುಗೆಯಾಯಿತು. ಮತ್ತು ಸುಂದರವಾಗಿ ಕಂಡಿತು. ಏಕೆಂದರೆ ನಾನು ನಗರ ಆಡಳಿತದಲ್ಲಿ ಭಾಗಿಯಾಗಿದ್ದೇನೆ. ಆದ್ದರಿಂದ ನನಗೂ ಆಸೆಯಿತ್ತು. ಮಸೀದಿ ನಗರದ ಮಧ್ಯಭಾಗದಲ್ಲಿರಬೇಕೆಂದು. ಆದರೆ ಖಲೀಫರು ಹೇಳಿದ ಮಾತು. ಪೇಟೆಯ ಜೊತೆ ಜೊತೆಯಲ್ಲಿ ಈಗ ಮಸೀದಿಯಲ್ಲಿ ಜೀವನದ ವೇಗದಿಂದ ಸ್ವಲ್ಪ ನಿಂತು ಶಾಂತಿಗಾಗಿ ಸಮಯ ದೊರೆಯಬಹುದು, ಈ ಭಾವನೆ ನನಗೆ ತುಂಬಾ ಮೆಚ್ಚುಗೆಯಾಯಿತು. ನಾನು ಈ ಮೊದಲು ಸಹ ಫೋಟೋಗಳಲ್ಲಿ ವಿಧಿಯೋಗಗಳಲ್ಲಿ ಖಲೀಫರಿಗೆ ಕಂಡಿದ್ದಾದರೂ ಮೊದಲ ಬಾರಿಗೆ ನೇರವಾಗಿ ಕಂಡು ಅವರ ಪ್ರಭಾವಪೂರ್ಣ ವ್ಯಕ್ತಿತ್ವ ಇನ್ನಷ್ಟು ಪ್ರಭಾವ ಬೀರಿದೆ. ಅದಾಗ್ಯೂ ಖಲೀಫರು ಮೌನ ಸ್ವಭಾವದವರಾಗಿದ್ದಾರೆ. ಆದರೆ ಅವರ ವ್ಯಕ್ತಿತ್ವ ಹೃದಯಗಳ ಮೇಲೆ ಬಹಳ ಆಳವಾದ ಪ್ರಭಾವ ಬೀರುತ್ತದೆ.

ಇನ್ನೋರ್ವ ಅತಿಥಿ Mirko Roschen ಸಾಹಿಬ್ ಅವರು Local mechanic ಆಗಿದ್ದಾರೆ. ಹೇಳುತ್ತಾರೆ. ಖಲೀಫರ ಭಾಷಣ ನನಗೆ ತುಂಬಾ ಉಚ್ಛ ವಿಚಾರಗಳಿಂದ ತುಂಬಿರುವಂತೆ ಕಂಡಿದೆ. ಏಕೆಂದರೆ ಈ ಅಂಧಕಾರದ ಕಾಲದಲ್ಲಿ ನಮಗೆ ನಿಜವಾಗಿಯೂ ಒಬ್ಬರು ಮತ್ತೊಬ್ಬರ ಬಗ್ಗೆ ಕಾಳಜಿ ವಹಿಸಬೇಕಾಗಿದೆ. ಈ ಸಂದೇಶ ಬಹಳ ಅವಶ್ಯಕವಾಗಿದೆ. ಇಂದು ಖಲೀಫರ ಭಾಷಣ ಆಲಿಸಿ ಮತ್ತೊಮ್ಮೆ ಎಲ್ಲಾ ಧರ್ಮಗಳು ಒಂದೇ ದೇವನ ಕಡೆ ಬೊಟ್ಟು ಮಾಡುತ್ತವೆ ಎಂಬುದು ಜ್ಞಾಪನವಾಯಿತು.

ಮೆಕ್ಕಿ ಮೇಲಿಯನ್ ಪಾರಸನ್ ಸಾಹಿಬ್ ಅವರು ಓರ್ವ Investment manager ಆಗಿದ್ದಾರೆ. ತಮ್ಮ ಅನಿಸಿಕೆಯನ್ನು ವ್ಯಕ್ತಪಡಿಸುತ್ತಾ ಹೇಳುತ್ತಾರೆ. ನನಗೆ ಖಲೀಫರ ಭಾಷಣ ತುಂಬಾ ಒಳ್ಳೆಯದೆನಿಸಿತು. ಮತ್ತು ನನಗೆ ಈ ಮಾತು ತುಂಬಾ ಹಿಡಿಸಿತು. ಖಲೀಫರು ತಮ್ಮ ಸಂಬೋಧನೆಯಲ್ಲಿ ಕೇವಲ ತಮ್ಮ ಜಮಾಅತಿಗೆ ಮೀಸಲು ಇರಿಸಿಲ್ಲ. ಬದಲು ಪ್ರತಿಯೊಬ್ಬರನ್ನು ಸಂಬೋಧಿಸಿದರು. ಆ ಮಾತುಗಳು ಎಲ್ಲ ಧರ್ಮದವರಿಗೆ, ನಾಸ್ತಿಕರಿಗೆ ಸಮಾನ ಮಹತ್ವ ಹೊಂದಿರುತ್ತದೆ. ಅವರ ಪದಗಳು ಕೇವಲ ಧರ್ಮಾಭಿಮಾನಿಗಳಿಗೆ ಅಷ್ಟೇ ಅಲ್ಲ, ನಂಬಿಕೆ ಇಲ್ಲದವರಿಗೆ ಸಹ ಶಾಂತಿ ನೀಡುವಂತಿದ್ದವು. ಅವರ ಎಲ್ಲಾ ಮಾತುಗಳಲ್ಲಿ ಶಾಂತಿಯೇ ಕೇಂದ್ರಬಿಂದುವಾಗಿತ್ತು. ಅವರ ಮಾತುಗಳಿಂದ ನಾನು ಕಲಿತಿದ್ದೇನೆಂದರೆ– ಇಸ್ಲಾಮಿನ ಶಿಕ್ಷಣವಿದೆ, ಇತರರ ಹಕ್ಕುಗಳನ್ನು ಪಾಲಿಸದೆ ನೀವು ಪರಿಪೂರ್ಣರಾಗಲು ಸಾಧ್ಯವಿಲ್ಲ ಎಂಬುದು. ನನಗೆ ಖಲೀಫರ ವ್ಯಕ್ತಿತ್ವ ಒಂದು ಸಶಕ್ತ ಮತ್ತು ವಿಶಾಲ ಬುದ್ಧಿಜೀವಿಯಾಗಿ ಕಂಡಿತು. ಅವರ ಸಭೆಯಲಿಲ ನಾನು ಶಾಮೀಲಾಗಿದ್ದರು. ನನಗೆ ಹೆಮ್ಮೆಯ ವಿಷಯವಾಗಿದೆ.

ಓರ್ವ ಮಹಿಳೆ ಅತಿಥಿ Anette wetekam ಸಾಹಿಬಾ ಅಕ್ಟೋಬರ್‌ನಲ್ಲಿ ಬರುವ ಚುನಾವಣೆಯಲ್ಲಿ ಅಭ್ಯರ್ಥಿಯು ಆಗಿದ್ದರು, ಅವರ ಭಾಷಣ ಅತ್ಯಂತ ಉತ್ತಮವಾಗಿತ್ತು ಮತ್ತು ಬಹಳ ಹೃದಯಸ್ಪರ್ಶಿಯಾಗಿತ್ತು. ನನಗೆ ಈ ಮಾತು ಬಹಳ ಹಿಡಿಸಿತು. ಖಲೀಫರು ಸ್ಪಷ್ಟವಾಗಿ ಹೇಳಿದರು. ಲೋಕದ ಸ್ಥಿತಿ ಹದಗೆಟ್ಟಿದೆ. ಇದು ಅಂಧಕಾರಮಯ ಕಾಲವಾಗಿದೆ. ಇದರಲ್ಲಿ ವಿಶೇಷವಾಗಿ ನಾವು ಪರಸ್ಪರ ಅರಿತು ನಡೆದುಕೊಳ್ಳಬೇಕಾಗಿದೆ. ಈ ಮಾತು ನನ್ನ ಹೃದಯಕ್ಕೆ ನಾಟಿದೆ. ನನಗೆ ಇಂದು ಖಲೀಫರಿಂದ ಕಲಿತಂತಾಯಿತು. ಪವಿತ್ರ ಖುರ್‌ಆನ್ ಒಂದು ಎಂತಹ ಗ್ರಂಥವಾಗಿದೆ ಎಂದರೆ ಅದು ಇತರರ ಹಕ್ಕುಗಳನ್ನು ಪಾಲಿಸಲು ಒತ್ತು ನೀಡುತ್ತದೆ. ಇತರರಿಗೆ ಗೌರವಿಸಲು ಮತ್ತು ಅವರ ಸುರಕ್ಷತತೆಗೆ ಉಪದೇಶಿಸುತ್ತದೆ. ಕೇವಲ ಮುಸ್ಲಿಮರ ಸುರಕ್ಷತೆಗೆ ಹೇಳುವುದಿಲ್ಲ. ಖಲೀಫರ ವ್ಯಕ್ತಿತ್ವ ಬಹಳ ಉಚ್ಛವಾಗಿದೆ. ಅವರ ಮಾತುಗಳು ಎಲ್ಲರ ಹೃದಯಕ್ಕೆ ಸ್ಪರ್ಶಿಸುವಂತಿವೆ. ಅವರ ಸಭೆಯಲ್ಲಿ ಹಾಜರಾಗಿದ್ದು ಒಂದು ವಿಶೇಷವಾದ ಅನುಭವವಾಗಿದೆ, ನಾನು ಈ ಕ್ಷಣಗಳನ್ನು ಎಂದೂ ಮರೆಯಲು ಸಾಧ್ಯವಿಲ್ಲ.

Soven mullen winter ಸಾಹಿಬ್ ಅವರು ಓರ್ವ commercial clerk ಅಗಿದ್ದಾರೆ. ಅವರು ಮೊದಲ ಬರಿಗೆ ಖಲೀಫರನ್ನು ಸೇರಲು ಕಂಡಿದ್ದಾರೆ. ಹೇಳುತ್ತಾರೆ. ಇದು ಇಷ್ಟೊಂದು ದೊಡ್ಡ ಹಾಗೂ ಸುವ್ಯವಸ್ತಿತ ಕಾರ್ಯಕ್ರಮವಾಗಿರಬಹುದು ಎಂದು ನಾನು ಊಹಿಸಿರಲಿಲ್ಲ. ನಾನು ಕಾರ್ಯಕ್ರಮದ ಮೊದಲು ತಪ್ಪಿನಿಂದಾಗಿ ಮಸೀದಿಯ ಕಡೆ ಹೊರಟಿದ್ದೆ. ನಮಾಝ್‌ಗೋಸ್ಕರ ಅಷ್ಟೊಂದು ಸಂಖ್ಯೆ ಕಂಡು ಜನರು ಮಸೀದಿ ತುಂಬಿ ಹೊರಗೆ ಸಹ ನಮಾಝ್ ಮಾಡುತ್ತಿದ್ದರು, ನೋಡಿ ಚಕಿತಗೊಂಡೆ. ಖಲೀಫರು ತಮ್ಮ ಭಾಷಣದಲ್ಲಿ ಪದಗಳನ್ನು ಬಹಳ ಜಾಣ್ಮೆಯಿಂದ ಆಯ್ದು ಉಪಯೋಗಿಸುತ್ತಾರೆ, ಏಕೆಂದರೆ ಅವರು ವಿವರಿಸಿದರು. ಇಸ್ಲಾಮಿನ ಶಿಕ್ಷಣಗಳು ಎಲ್ಲರೂ ಅರಿವಂತಾಗಿದ್ದವು. ಮತ್ತು ಮನ್ನಿಸಲೇಬೇಕಾಗುವಂತಾಗಿದದವು. ಅದು ಇತರ ಧರ್ಮಗಳ ಸಹ ಶಿಕ್ಷಣವಗಿದೆ. ಅವರ ಭಾಷಣ ಆಲಿಸಿ ನನಗೆ ಇನ್ನಷ್ಟು ಆಧ್ಯಾತ್ಮಿಕತೆಯ ಅರಿವು ಮೂಡಿತು. ನನಗೆ ಅದರಲ್ಲಿ ಆಸಕ್ತಿಯೂ ಇದೆ. ಇಂದು ನಾನು ಇದು ಕಲಿಯುವಂತಾಯಿತು. ಈ ಮೂರು ದೊಡ್ಡ ಧರ್ಮಗಳು ನಿಜವಾಗಿಯೂ ಒಬ್ಬನೇ ದೇವನಿಂದ ಬಂದದ್ದಾಗಿವೆ. ಖಲೀಫರು ಬಹಳ ಮೌನ ಸ್ವಭಾವದವರಾಗಿ ಕಾಣುತ್ತಾದರೂ ಓರ್ವ ಶಾಂತ ಸ್ವಭಾವದವರಾಗಿ ಕಾಣುತ್ತಾರೆ. ಅವರ ವ್ಯಕ್ತಿತ್ವ ಅತ್ಯಂತ ಸುಂದರವಾದ ವ್ಯಕ್ತಿತ್ವವಾಗಿದೆ, ಅದರ ಪ್ರಭಾವ ತಂತಾನೆ ಇತರರಿಗೆ ಹೃದಯಗಳ ಮೇಲೆ ಆಗುತ್ತಿದೆ.

ಇನ್ನೋರ್ವ ಅತಿಥಿ Trupp ಸಾಹಿಬ್ ತಮ್ಮ ಭಾವನೆಗಳನ್ನು ವ್ಯಕ್ತಪಡಿಸುತ್ತಾ ಹೇಳುತ್ತಾರೆ. ನಾನು ಖಲೀಫರ ಭಾಷಣ ಬಹಳ ಪ್ರಭಾವಪೂರ್ಣವಾಗಿ ಕಂಡಿದ್ದೇನೆ, ಅವರು ನುಡಿದಂತೆ ನಡೆಯುವವರಿದ್ದಾರೆ ಎಂಬುದಾಗಿ ನಾನು ಭಾವಿಸುತ್ತೇನೆ.

ಇನ್ನೋರ್ವ ಅತಿಥಿ Shaheda Sheikh ಸಾಹಿಬಾ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸುತ್ತಾ ಹೇಳಿದರು. ಖಲೀಫರು ಲೋಕದಲ್ಲಿ ಶಾಂತಿ ಸ್ಥಾಪನೆಯಾಗಲು ಎಲ್ಲಾ ಪ್ರಯತ್ನಗಳು ಮಾಡುತ್ತಿದ್ದಾರೆ ಮತ್ತು ಯಥಾರ್ಥ ಇಸ್ಲಾಮಿನ ಪ್ರಚಾರವನ್ನು ಮಾಡುತ್ತಿದ್ದಾರೆ.

ಇನ್ನೋರ್ವ ಅತಿಥಿ Desime wirknen ಸಾಹಿಬಾ ತಮ್ಮ ಭಾವನೆಗಳನ್ನು ಹೀಗೆ ವ್ಯಕ್ತಪಡಿಸುತ್ತಾರೆ. ಹುಝೂರ್ ಶಾಂತಿಯ ಸಂದೇಶವನ್ನು ಪಸರಿಸಿದ್ದಾರೆ. ಹುಝೂರರ ಭಾಷಣಕ್ಕಿಂತ ಮುಂಚೆ ಇಸ್ಲಾಮಿನ ಕುರಿತು ನನ್ನಲ್ಲಿ ನಕಾರಾತ್ಮಕ ಭಾವನೆಗಳಿದ್ದವು. ಆದರೆ ಇಂದು ಮಸೀದಿಯ ಉದ್ಘಾಟನೆ ಮತ್ತು ಹುಝೂರರ ಭಾಷಣದಿಂದ ಪರಿವರ್ತಿತನಾಗಿದ್ದೇನೆ.

ಇನ್ನೋರ್ವ ಅತಿಥಿ Sieglinde Engien ಸಾಹಿಬ್ ಹೇಳುತ್ತಾರೆ.

ಒಟ್ಟುಗೂಡಿ ಇರುವುದರಿಂದ ಸಂಬಂಧ ವೃದ್ಧಿಯಾಗುತ್ತದೆ. ಇಂತಹ ಕಾರ್ಯಕ್ರಮಗಳು ಭ್ರಾತೃತ್ವಕ್ಕೆ ಕಾರಣವಾಗುತ್ತದೆ. ಖಲೀಫರ ಸಂದೇಶ ಜಾಗತಿಕ ಸಂದೇಶವಾಗಿದೆ. ಅದು ಇಡೀ ಲೋಕಕ್ಕಾಗಿ ಆಗಿದೆ.

ಇನ್ನೋರ್ವ ಅತಿಥಿ ರೋಝಿ ಸಾಹಿಬ ಹೇಳುತ್ತಾರೆ. ಅವರು ಹುಝೂರ್ ಅನ್ವರ್(ಅತಬಿಅ)ರ ವ್ಯಕ್ತಿತ್ವದಿಂದ ತುಂಬಾ ಪ್ರಭಾವಿತರಾದರು. ಅದನ್ನು ಪದಗಳಲ್ಲಿ ವಿವರಿಸಲು ಸಾಧ್ಯವಿಲ್ಲ. ಅವರು ರಾತ್ರಿ ಸರಿಯಾಗಿ ನಿದ್ರೆ ಮಾಡಿರಲಿಲ್ಲ. ಹುಝೂರ್ ಅನ್ವರ್(ಅತಬಿಅ)ರನ್ನು ಕಾಣಲು ತುಂಬಾ ಕುತೂಹಲದಲ್ಲಿದ್ದರು. ಖಲೀಫರ ಬರುವಿಕೆಯ ಮುಂಚೆ ಅವರು ತುಂಬಾ ನಿರಾಶೆಯಲ್ಲಿದ್ದರು.

ಇನ್ನೋರ್ವ ಅತಿಥಿ Mr. Messow ಸಾಹಿಬ್ ಹೇಳುತ್ತಾರೆ. ಈ ಸಮಾರಂಭದ ವ್ಯವಸ್ಥೆ ಕಂಡು ತುಂಬಾ ಪ್ರಭಾವಿತನಾಗಿದ್ದೇನೆ. ಅವರು ಖಲಿಫರನ್ನು ಮೊದಲ ಬಾರಿಗೆ ಕಂಡವರಾಗಿದ್ದರೆ. ಅವರು ಖಲೀಫರ ವ್ಯಕ್ತಿತ್ವದಿಂದ ತುಂಬಾ ಪ್ರಭಾವಿತರಾದರು. ಹೇಳಿದರು. ಹುಝೂರ್ ಅನ್ವರ್(ಅತಬಿಅ) ಪವಿತ್ರ ಖುರ್‌ಆನ್‌ನಿಂದ ಪ್ರಸ್ತುತಪಡಿಸಿದ ಸುಂದರವಾದ ಉಪದೇಶಗಳಿಂದ ತಿಳಿದುಬರುವುದೇನೆಂದರೆ ಇಸ್ಲಾಮಿನ ಶಿಕ್ಷಣ ತಪ್ಪಲ್ಲ, ಬದಲು ಮುಸಲ್ಮಾನರ ನಡವಳಿಕೆ ತಪ್ಪಾಗಿವೆ.

ಇನ್ನೋರ್ವ ಅತಿಥಿ Ruddi Gol ಸಾಹಿಬ್ ಹೇಳುತ್ತಾರೆ. ನಾನು ಖಲೀಫರಿಗೆ ಮೊದಲ ಬಾರಿಗೆ ಕಂಡಿದ್ದೇನೆ. ಖಲೀಫರ ಭಾಷಣ ಇಂದಿನ ಪರಿಸ್ಥಿತಿಯಲ್ಲಿ ಅತ್ಯುತ್ತಮವಾಗಿದೆ. ಹುಝೂರ್ ಅನ್ವರ್(ಅತಬಿಅ)ರ ಭಾಷಣದಿಂದ ತಿಳಿಯಿತು. ಇಸ್ಲಾಮ್ ಧರ್ಮದಲ್ಲಿ ಜನರ ಹಕ್ಕುಗಳು ಮತ್ತು ನೆರೆಯವರ ಹಕ್ಕಗುಳು ಮುಖ್ಯವಾಗಿವೆ. ಆಧ್ಯಾತ್ಮಿಕತೆಗಾಗಿ ಮಸೀದಿ ಅವಶ್ಯಕವಾಗಿದೆ ಎಂಬ ಮಾತಿಗೆ ನಾನು ಸಹಮತ ಹೊಂದಿದ್ದೇನೆ.

ಇನ್ನೋರ್ವ ಮಹಿಳಾ ಅತಿಥಿ Happel Beatrix ಸಾಹಿಬಾ ತಮ್ಮ ಭಾವನೆಗಳನ್ನು ಹೀಗೆ ವ್ಯಕ್ತಪಡಿಸಿದರು. ಖಲೀಫರ ಭಾಷಣ ಅಲ್ಲಾಡಿಸುವಂತಿತ್ತು. ಒಂದು ಮುಖ್ಯವಾದ ವಿಷಯ ಕಂಡಿದ್ದೇನೆಂದರೆ ಹುಝೂರ್ ಸಂದರ್ಭೋಚಿತವಾಗಿ ಮಾತನಾಡಿದರೇ ಹೊರತು ಲಿಖಿತ ಭಾಷಣ ಮಾಡಲಿಲ್ಲ. ಅಲ್ಲದೇ ಅವರು ಗತ ಭಾಷಣಗಾರರ ಪ್ರಶ್ನೆಗಳಿಗೆ ಮತ್ತು ಭಾವನೆಗಳಿಗೆ ಉತ್ತರ ನೀಡಿದರು. ಭಾಷಣದಲ್ಲಿ ಅತ್ಯಂತ ಆಳವಾದ ಎಂತಹ ಮಾತುಗಳನ್ನು ಆಡಿದ್ದರೆಂದರೆ ಅದರ ಬಗ್ಗೆ ಚಿಂತಿಸುವುದು ಎಲ್ಲರ ಹಕ್ಕಾಗಿದೆ.

**(ಮುಂದುವರಿಯುವುದು)**

## ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ರಕ್ಷಿಸಿರಿ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಕಾಲದ ಸ್ಮರಣೀಯ ಪತ್ರಿಕೆ. **"ಅಖ್ಬಾರ್ ಬದರ್"** 1952 ರಿಂದ ಸತತವಾಗಿ ಖಾದಿಯಾನ್ ದಾರುಲ್‌ಅಮಾನಿನಿಂದ ಪ್ರಕಟಗೊಳ್ಳುತ್ತಿದೆ ಮತ್ತು ಅಹ್ಮದೀಯರ ಆಧ್ಯಾತ್ಮಿಕ ಅವಶ್ಯಕತೆಗಳನ್ನು ಪೂರೈಸುತ್ತಿದೆ. ಇದರಲ್ಲಿ ಪವಿತ್ರ ಖುರ್‌ಆನಿನ ಆಯತ್‌ಗಳು, ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರ ಹದೀಸ್‌ಗಳು, ಹಝ್ರತ್ ಮಸೀಹ್ ಮೌಊದ್(ಅ)ರ ಮಲ್‌ಪೂಝಾತ್ ಮತ್ತು ಬರವಣಿಗೆಗಳಲ್ಲದೆ ಹುಝೂರ್ ಅನ್ವರ್(ಅತಬಿಅ)ರವರ ಹೊಸ ಖುತ್‌ಬ ಜುಮುಆ, ಉಪನ್ಯಾಸಗಳು, ಸಂದೇಶಗಳು, ಖುತ್‌ಬ ಜುಮುಆ ಪ್ರಶ್ನೋತ್ತರದ ರೂಪದಲ್ಲಿ ಮತ್ತು ಹುಝೂರ್ ಅನ್ವರ್‌ರವರ ಪ್ರವಾಸದ ವರದಿಗಳು, ಅದೇ ರೀತಿ ಆಧ್ಯಾತ್ಮಿಕ ಮತ್ತು ಲೌಕಿಕ ಜ್ಞಾನಗಳ ಸಂಪತ್‌ಭರಿತ ವರದಿಗಳು ಇರುತ್ತದೆ. ಅವುಗಳನ್ನು ಅಧ್ಯಯನ ಮಾಡುವುದು, ಅವುಗಳನ್ನು ಅನ್ಯರಿಗೆ ತಲುಪಿಸುವುದು ಮತ್ತು ಅದರಿಂದ ತಮ್ಮ ಮತ್ತು ತಮ್ಮ ಮಕ್ಕಳ, ಕುಟುಂಬದವರ ತರಬೇತಿ ಮಾಡುವುದು ನಮ್ಮ ಕರ್ತವ್ಯವಾಗಿದೆ. ಈ ಎಲ್ಲಾ ಉದ್ದೇಶಗಳನ್ನು ಪಡೆಯುವುದಕ್ಕೆ ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ಕಾಪಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಆಧ್ಯಾತ್ಮಿಕ ಜ್ಞಾನ ಮತ್ತು ತರಬೇತಿಯನ್ನೂ ಒಳಗೊಂಡಿರುವ ಈ ಪವಿತ್ರವಾದ ಪತ್ರಿಕೆಯ ಅವಶ್ಯಕತೆ ಏನೆಂದರೆ ಅದನ್ನು ಗೌರವಿಸಬೇಕು. ಆದ್ದರಿಂದ ಇದನ್ನು ರದ್ದಿಗೆ ಹಾಕುವುದು ಅದರ ಪಾವಿತ್ರ್ಯತೆಯನ್ನು ಚದುರಿಸುವ ಸಮಾನವಾಗಿದೆ. ಅದನ್ನು ರಕ್ಷಿಸಲು ಕಷ್ಟವಾಗುತ್ತಿದ್ದರೆ ಅದನ್ನು ಎಚ್ಚರಿಕೆಯಿಂದ ನಾಶಮಾಡಿರಿ. ಏಕೆಂದರೆ ಹೀಗೆ ಆ ಪವಿತ್ರ ಬರಹಗಳು ಅವಮಾನವಾಗಬಾರದು. ಅಹ್ಮದಿ ಸದಸ್ಯರೆಲ್ಲರೂ ಈ ಬಗ್ಗೆ ವಿಶೇಷ ಗಮನ ಹರಿಸುತ್ತೀರ ಮತ್ತು ಇದರಿಂದ ಉಪಯೋಗ ಗಳಿಸುವಿರೀ ಎಂದು ಆಶಿಸುತ್ತೇವೆ.

**(ಸಂಪಾದಕರು)**

## ಆಡಂಬರ ಮತ್ತು ತೋರ್ಪಡಿಕೆಗೊಸ್ಕರ ಹಕ್ಕ್ ಮಹರನ್ನು ನಿಶ್ಚಯಿಸುವುದು ತಪ್ಪು ಸಂಪ್ರದಾಯವಾಗಿರುತ್ತದೆ.

ಹಝ್ರತ್ ಮಸೀಹ್ ಮೌಊದ್(ಅ) ನುಡಿಯುತ್ತಾರೆ:

ವಧು ಹಾಗೂ ವರನ ಕಡೆಯವರು ಇಬ್ಬರು ಸೇರಿ ರಾಜಿಯಾಗಿ ಹಕ್ಕ್ ಮಹರ್ ನಿಶ್ಚಯಿಸಿ ಕೊಳ್ಳುತ್ತಾರೆ ಇದಕ್ಕೆ ಯಾವುದೇ ಆಕ್ಷೇಪವಿಲ್ಲ. ಆದರೆ ಶರೀಅತ್ತಿನಲ್ಲಿ ಹಕ್ಕ್ ಮಹರ್ ಇಷ್ಟೇ ನೀಡಬೇಕೆಂಬ ನಿಯಮ ಅಧಿಕೃತವಾಗಿ ಹದೀಸುಗಳಲ್ಲಿ ಯಾವುದೇ ಉಲ್ಲೇಖವಿಲ್ಲ. ಆದರೆ ಆ ಸಂಧರ್ಭಕನ್ನುಸಾರ ಹಕ್ಕ್ ಮಹರ್ ನಿಶ್ಚಯಿಸಿಕೊಳ್ಳಬಹುದು. ಅಂದರೆ ಪ್ರಸಕ್ತ ಸಮಯದಲ್ಲಿನ ಜನರ ಜೀವನ ಮಟ್ಟವೇ ಆಧಾರವಾಗಿರುತ್ತದೆ.

ನಮ್ಮ ಪ್ರಾಂತ್ಯದಲ್ಲಿರುವ ಒಂದು ಕೆಟ್ಟ ಸಂಪ್ರದಾಯವೆಂದರೆ ಕೇವಲ ಹೊರ ಜಗತ್ತಿನ ತೋರಿಕೆಗಾಗಿ ಹಾಗೂ ಆಡಂಬರಕ್ಕಾಗಿ ಲಕ್ಷಾಂತರ ಹಕ್ಕ್ ಮಹರ್ ಅನ್ನು ನಿಶ್ಚಿಸಿಕೊಳ್ಳುತ್ತಾರೆ. ಆದರೆ ಅವರ ಉದ್ದೇಶ ಬೇರೆಯೇ ಅಗಿರುತ್ತದೆ. ಅದೇ ರೀತಿ ವಧುವಿನ ಕಡೆಯವರು ವರನನ್ನು ತನ್ನ ಹಿಡಿತದಲ್ಲಿ ಇರಿಸಿಕೊಳ್ಳಲು ಈ ರೀತಿಯ ಹಕ್ಕ್ ಮಹರ್‌ಅನ್ನು ನಿಶ್ಚಯಿಸಿಕೊಳ್ಳುತ್ತಾರೆ. ಆದರೆ ಇದರಿಂದ ಬೇರೆ ಅನೇಕ ಸಮಸ್ಯೆಗಳು ಉದ್ಭವವಾಗುತ್ತದೆ.

**(ಮಲ್‌ಫೂಝಾತ್, ಸಂಪುಟ–3, ಪುಟ–284) (ರಿಶ್ತನಾತ ವಿಭಾಗ, ನಝಾರತ್ ಇಸ್ಲಾಹ್ ವ ಇರ್ಷಾದ್, ಖಾದಿಯಾನ್)**

## ಖಾದಿಯಾನ್ ದಾರುಲ್ ಅಮಾನ್‌ನಲ್ಲಿ ಸಾಲಾನ ಇಜ್ತೆಮಾ 2024 ನಡೆಯುವ ದಿನಾಂಕಗಳು

ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಆಝೀಝ್‌ರವರು ಭಾರತದಲ್ಲಿ ಅಂಗ ಸಂಸ್ಥೆಗಳ (ಮಜ್ಲಿಸ್ ಅನ್ಸರುಲ್ಲಾ, ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ, ಲಜ್ನಾ ಇಮಾಇಲ್ಲಾ) ರಾಷ್ಟ್ರೀಯ ವಾರ್ಷಿಕ ಕೂಟಗಳನ್ನು (ಇಜ್ತೆಮಾ) 25, 26 ಮತ್ತು 27ನೇ ಅಕ್ಟೋಬರ್ 2023 ರಂದು (ಶುಕ್ರವಾರ, ಶನಿವಾರ, ಭಾನುವಾರ) ಆಯೋಜಿಸಲು ಅನುಮತಿ ನೀಡಿದ್ದಾರೆ.

ಎಲ್ಲಾ ಉಪ ಸಂಸ್ಥೆಗಳ ಸದಸ್ಯರು ಖಾದಿಯಾನಿನಲ್ಲಿ ಈ ಆಧ್ಯಾತ್ಮಿಕ ಪರಿಸರದಲ್ಲಿ ಆಯೋಜಿಸಲಾಗುವಂತಹ ಇಜ್ತೆಮಾಗಳಲ್ಲಿ ಪಾಲ್ಗೊಳ್ಳಲು ಇಂದಿನಿಂದಲೆ ತಯಾರಿ ಪ್ರಾರಂಭಿಸಿರಿ. ಈ ಇಜ್ತೆಮಾಗಳು ತರಬೇತಿಯ ಮುಖ್ಯ ಮೂಲವಾಗಿದೆ.

**(ಸದರ್ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಭಾರತ)**

***ವಿಶೇಶ ಸೂಚನೆ***

"ಬದರ್" ವಾರಪತ್ರಿಕೆಯ ಚಂದಾದರರಲ್ಲಿ ತಮ್ಮ ಬಾಕಿ ಇರುವ ವಾರ್ಷಿಕ ಶುಲ್ಕವನ್ನು ಶೀಘ್ರವೇ ಪಾವತಿಸಲು ವಿನಂತಿ.
ಮೊಬೈಲ್ ಸಂಖ್ಯೆ: 9866358609 (ವ್ಯವಸ್ಥಾಪಕರು)

## *129 ನೇ ಜಲ್ಸಾ ಸಾಲಾನ ಖಾದಿಯಾನ್ 27, 28, 29 ಡಿಸೆಂಬರ್ 2023ರಂದು ಆಯೋಜಿಸಲಾಗುವುದು*

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 129ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 27, 28 ಮತ್ತು 29ನೇ ಡಿಸೆಂಬರ್ 2024 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮಲ್ಲಾಹ್.**

**(ನಾಝಿರ್ ಇಸ್ಲಾಹ್–ವ–ಇರ್‌ಶಾದ್ ಖಾದಿಯಾನ್)**

**ಪವಿತ್ರ ಖುರ್‌ಆನ್ ವಜ್ರವೈಢೂರ್ಯಗಳ ಒಂದು ನಿಧಿಯಾಗಿದೆ. ಆದರೆ ಜನರು ಅದನ್ನು ಅರಿತಿಲ್ಲ.**
(ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್)

**ದುಆವಿನ ಆಕಾಂಕ್ಷಿ:**
**Mubarak Ahmed Naseem & Family, Shimoga, Karnataka**

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadr.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2023-25 Vol No.05, Thursday, 20 June 2024, Issue No. 25

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/- ) (WEIGHT: 20-50, grms / issue)

# ಸೈಯಿದುನಾ ಹಝ್ರತ್ ಅಮೀರುಲ್ ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ)ರವರ ಜರ್ಮನಿಯ ಪ್ರವಾಸ ಆಗಸ್ಟ್, ಸೆಪ್ಟೆಂಬರ್ 2023

*(ಬದರ್ ಸಂಚಿಕೆ-24ರ ಉಳಿದ ಭಾಗ ಮುಂದುವರಿಸಲಾಗಿದೆ)*

**ಅತಿಥಿಗಳ ಅನಿಸಿಕೆಗಳು**

ಇಂದು ಈ ಸಮಾರಂಭದಲ್ಲಿ ಭಾಗವಹಿಸಿದ ಹಲವು ಅತಿಥಿಗಳು ತಮ್ಮ ಭಾವನೆಗಳನ್ನು ಅನಿಸಿಕೆಗಳನ್ನು ವ್ಯಕ್ತ ಮಾಡದಿರಲಿಲ್ಲ. ಇಲ್ಲಿ ಕೆಲವು ಅತಿಥಿಗಳ ಅನಿಸಿಕೆಗಳನ್ನು ಪ್ರಸ್ತುತಪಡಿಸಲಾಗುತ್ತಿದೆ.

Henbert unger ಸಾಹಿಬ್ Florstadt ನಗರದ ಮೇಯರ್ ಹೇಳುತ್ತಾರೆ: ನನಗೆ 8 ವರ್ಷ ಮೊದಲು ಅಡಿಗಲ್ಲು ಸಮಾರಂಭ ಸಂದರ್ಭದಲ್ಲಿಯೂ ಭೇಟಿಯ ಅವಕಾಶ ಸಿಕ್ಕಿತ್ತು. ಆಗಲೂ ಸಹ ಹುಝೂರ್ ಅನ್ವರ್(ಅತಬಿಅ) ಅವರ ವ್ಯಕ್ತಿತ್ವ ತುಂಬ ಪ್ರಭಾವಪೂರ್ಣವಾಗಿತ್ತು.

ನನ್ನ ದೃಷ್ಟಿಯಲ್ಲಿ his holiness ಒಬ್ಬ ಅತ್ಯಂತ ಪ್ರೀತಿಯ ವ್ಯಕ್ತಿತ್ವಂಯುಳ್ಳವರಾಗಿದ್ದಾರೆ, ಅವರ ಜೊತೆ ಪ್ರೀತಿಯಿಂದ ಮಾತನಾಡಬಹುದಾಗಿದೆ. ಹುಝೂರ್ ಅನ್ವರ್(ಅತಬಿಅ) ವ್ಯಕ್ತಿತ್ವದ ನೆಲೆಯಲಿ ತುಂಬಾ ಗೌರವಾನ್ವಿತರಾಗಿರುವರು. ಅವರು ಇಷ್ಟು ಉನ್ನತ ಹುದದೆಯುಲ್ಲಿದ್ದವರಾದರೂ ಸಹೃದಯಿಗಳಾಗಿದ್ದಾರೆ, ಧಾರ್ಮಿಕ ಮುಖಂಡರಾಗಿಯೂ ಲೌಕಿಕ ಜ್ಞಾನವು ಹೊಂದಿರುತ್ತಾರೆ.

ಹುಝೂರ್ ಅನ್ವರ್(ಅತಬಿಅ) ಇಂದಿನ ಭಾಷಣದಲ್ಲಿ ಹೇಳಿದ್ದರು. ಮುಸಲ್ಮಾನರಿಗೆ ಧರ್ಮವನ್ನು ರಕ್ಷಿಸುವ ಆಜ್ಞೆ ಇಲ್ಲದಿರುತ್ತಿದದರೆ ಇಲ್ಲಿಯವರೆಗೆ ಯಾವ ಧರ್ಮವು ಉಳಿದರುತ್ತಿರಲಿಲ್ಲ. ಅವರ ಈ ಮಾತಿಗೆ ನಾನು 100% ಸಹಮತ ಹೊಂದಿರುತ್ತೇನೆ. ಹುಝೂರ್ ಅನ್ವರ್(ಅತಬಿಅ) ಅವರ ಇಲ್ಲಿಯ ಆಗಮನ ನನಗೆ ಅತ್ಯಂತ ಗೌರವದ ವಿಷಯವಾಗಿದೆ.

Michel Hann ಸಾಹಿಬ್ ಜೋಡು ನಗರ Niddtal ನ ಮೇಯರ್ ಹೇಳುತ್ತಾರೆ. ಖಲೀಫರ ಜೊತೆಯಲ್ಲಿ ಅತ್ಯಮತ ರೋಚಕ ಮಾತುಕತೆ Agriculture ಕುರಿತು ಆಯಿತು. ಈ ಪೈಕಿ ನನಗೆ ಹೆಚ್ಚಿನ ಮಾಹಿತಿ ಹಂಚಿಕೊಳ್ಳುವಂತಾಯಿತು. ಖಲಿಫರು ನನಗೆ ತಿಳಿಸಿದರು. ಅವರು ಭೂಮಿಯ ವಿಸ್ತೀರ್ಣಕ್ಕಾಗಿ acres ಎಂದು ಬಳಸುತ್ತಾರೆ. ಅದರ ಬದಳಾಗಿ ಜರ್ಮನರು hectares ಎಂದು ಹೇಳುತ್ತಾರೆ. ಖಲೀಫರಿಗೆ ನಾವು ಇಲ್ಲಿ ಏನೇನೆಲ್ಲ ಬೆಳೆಸುತ್ತೇವೆ ಎನ್ನುವ ಬಗ್ಗೆ ತುಂಬಾ ಆಸಕ್ತಿ ಇತ್ತು. ಅವರು ವಿಚಾರಿಸಿದರು. ಯಾವ ರೀತಿಯ ಬೆಳೆಗಳನ್ನು ನೀವು ಬೆಳೆಸುತ್ತೀರಿ ಎಂದು. ಖಲೀಫರ ವ್ಯಕ್ತಿತ್ವ ನನಗೆ ಬಹಳ ಪ್ರಭಾವಪೂರ್ಣವಾಗಿದ್ದಿತ್ತು. ಇಂತಹ ಗೌರಾವಾನ್ವಿತ ವ್ಯಕ್ತಿಯೊಡನೆ ಭೇಟಿಯಾಗುವ ಭಾಗ್ಯ ದೊರೆತಿದ್ದು ನನ್ನ ಭಾಗ್ಯವಾಗಿದೆ. ನಮುಗೆ ಪರಸ್ಪರ ವ್ಯವಹಾರಗಳನ್ನು ಬೆಳೆಸಲು ಪ್ರಯುತ್ನಿಸುತ್ತಿರಬೇಕು ಎಂಬ ಮಾತು ತುಂಬಾ ಮೆಚ್ಚುಗೆಯಾಯಿತು. ಅವರ ಮಾತುಗಳು ಹೃದಯಸ್ಪರ್ಶಿಯಾಗಿವೆ ಮತ್ತು ತುಂಬಾ ಸಹಜ ರೀತಿಯದ್ದಾಗಿವೆ. ತಕ್ಷಣ ಅರ್ಥವಾಗುತ್ತವೆ. ನನಗೆ ಅವರ ಈ ಮಾತು ಆಶ್ಚರ್ಯಗೊಳಿಸುವಂತಿತ್ತು. ಅವರಿಗೆ ಇಸ್ಲಾಮಿನ ಶಿಕ್ಷಣದ ಅರಿವು ಎಷ್ಟೊಂದು ಆಳವಾಗಿದೆ, ನನಗೆ ಖಲೀಫರು ಹೇಳಿದ್ದು, ಮೊದಲು ಇತರರ ಹಕ್ಕುಗಳನ್ನು ಪಾಲಿಸಬೇಕು ಮತ್ತೆ ತಮ್ಮ ಹಕ್ಕುಗಳ ಬಗ್ಗೆ ಗಮನಹರಿಸಬೇಕು ಎಂಬ ಮಾತು ತುಂಬಾ ಮೆಚ್ಚುಗೆಯಾಯಿತು. ನನಗೆ ಖಲಿಫರ ಮಸೀದಿಯು ಮಾರ್ಕೆಟ್ ಬಳಿ ಇರುವ ಮಾತು ಮೆಚ್ಚುಗೆಯಾಯಿತು. ಕೆಲವು ಜನರು ಹೇಳುತ್ತಾರೆ. ಮಸೀದಿ ನಗರದ ಮಧ್ಯಭಾಗದಲ್ಲಿರಬೇಕಿತ್ತು ಎಂದು. ಆದರೆ ನಾನು ಈ ಮಾತಿನಿಂದ ಸಹಮತ ಹೊಂದುವುದಿಲ್ಲ. ಖಲೀಫರು ವ್ಯಕ್ತಪಡಿಸಿದ ವಿಚಾರ ತುಂಬಾ ಸರಿಯಾಗಿದೆ. ಇದುವೇ ಮಸೀದಿಗಾಗಿ ಉತ್ತಮ ಸ್ಥಳವಗಿದೆ. ಇಂದಿನಿಂದ ಆರು ನೂರು ವರ್ಷಗಳ ಹಿಂದೆ ಹೀಗೆ ಆಗುತ್ತಿತ್ತು. ದಿನನಿತ್ಯ ಕಾರ್ಯ ಮಾಡುವ ಖರೀದಿ ಮಾಡುವ ಜಾಗದಲ್ಲಿ ಚರ್ಚ್‌ಗಳು ಇರುತ್ತಿದ್ದವು. ಜನರು ತಮ್ಮ ದಿನನಿತ್ಯದ ಕಾರ್ಯಗಳ ಜೊತೆಯಲ್ಲಿ ಆರಾಧನೆ ಕಾರ್ಯಗಳು ಸಹ ಆರಾಮವಾಗಿ ಪಾಲಿಸುತ್ತಿದ್ದರು.

Tobiaas uttar ಸಾಹಿಬ್ ಅವರು ರಾಜ್ಯ ಅಸೆಂಬ್ಲಿಯು ಸದಸ್ಯರಾಗಿದ್ದರೆ. ಹೇಳಿದರು. ನನಗೆ ಕೆಲ ಅತಿಥಿಗಳ ಮುಂಚೆ Freidberg ನ ಮಸೀದಿಯ ಉದ್ಘಾಟನಾ ಸಂದರ್ಭದಲ್ಲಿ ಖಲೀಫತುಲ್ ಮಸೀಹರ ಭಾಷಣ ಆಲಿಸುವ ಭಾಗ್ಯ ದೊರಕಿತ್ತು. ಆದರೆ ಈ ಸಲ ತುಂಬಾ ಹತ್ತಿರದಿಂದ ನೋಡುವ ಮತ್ತು ಆಲಿಸುವ ಅವಕಾಶ ದೊರೆತಿದೆ. ಖಲೀಫರು ತುಂಬಾ ಮೌನ ಸ್ವಭಾವದವರಾಗಿ ಕಾಣುತ್ತಾರೆ. ಅವರು ಬಹಳ ಯೋಚನೆ ಮಾಡಿ ಸಮಯಕ್ಕೆ ತಕ್ಕುದಾದ ಪದಗಳನ್ನು ಆಯ್ಕೆ ಮಾಡುತ್ತಾರೆ, ಅವರ ದಿಧಾನ ಬಹಳ ಪ್ರಿಯವಾಗಿದೆ. ನನಗೆ ಮೆಚ್ಚುಗೆ ಆದ ಒಂದು ಮಾತು, ಅದೇನೆಂದರೆ ಅವರು ಕೇವಲ ಲಿಖಿತ ಭಾಷಣವನ್ನು ಓದಿ ಹೇಳಲಿಲ್ಲ. ಬದಲು ಎಲ್ಲ ಭಾಷಣಗಾರರ ಬಗ್ಗೆ ತಮ್ಮ ವ್ಯಾಖ್ಯಾನ ನೀಡಿದರು. ಅವರ ಪದಗಳು ತುಂಬಾ ಪ್ರಭಾವಪೂರ್ಣವಾಗಿದ್ದವು.

ಅವರು ಇಂದಿನ ಪರಿಸ್ಥಿತಿಗಳನ್ವಯ ಸ್ಪಷ್ಟಪಡಿಸಿದರು. ಇಂದಿನ ಭಯಂಕರವಾದ ಪರಿಸ್ಥಿತಿಯಲ್ಲಿ ನಮಗೆಯೇ ಏನಾದರೂ ಮಾಡಬೇಕಾಗಿದೆ, ಮುಖ್ಯವಾದ ಮಾತೇನಾಗಿತ್ತೆಂದರೆ, ವಿಶ್ವಾಸ ಹೊಂದಿದವರಿಗೆ ಇಂದು ಮುಖ್ಯ ಹೊಣೆ ಪಾಲಿಸಬೆಕಾಗಿದೆ, ನನಗೆ ಖಲೀಫರೊಡನೆ ಮಾತನಾಡುವ ಅವಕಾಶ ದೊರೆಯಿತು. ಅವರು ನನಗೆ ಈ ಮಾತನ್ನು ತಿಳಿಸಿದರು. ಅವರು ಎಲ್ಲಾ ಕಡೆ ಶಾಂತಿ ಸಂದೇಶ ತಲುಪಿಸುತ್ತಾರೆ ಮತ್ತು ಶಾಂತಿ ಸ್ಥಾಪನೆಗಾಗಿ ಪ್ರಯತ್ನಿಸುತ್ತಾರೆ.

ಇನ್ನೋರ್ವ ಅತಿಥಿ Chrishtoph Marinen ಸಹಿಬ್ ಅವರು ಬಿಲ್ಡರ್ ಆಗಿದ್ದಾರೆ, ಈ ಮಸೀದಿಯ ಮಾಡಿಗೆ ಅವರೇ ನಿರ್ಮಿಸಿದ್ದಾರೆ. ಹೇಳಿದರು.

ನನಗೆ ಖಲೀಫರ ನುಡಿಗಳು ಅವರು ಹೇಳುವ ರೀತಿ ಬಹಳ ಮೆಚ್ಚುಗೆಯಾಯಿತು. ಏಕೆಂದರೆ ಅವರ ಭಾಷೆ ಅತ್ಯಂತ ಸರಳ ಮತ್ತು ಮನವರಿಕೆಯಾಗುವಂತಿತ್ತು. ನಾನು ಅವರ ಮಾತುಗಳಿಗೆ 100% ಸಹಮತ ಹೊಂದಿದ್ದೇನೆ. ನೆರೆಯವರೊಡನೆ ಉತ್ತಮ ವ್ಯವಹಾರದ ಶಿಕ್ಷಣ ನನಗೆ ಕ್ರಿಸ್ತನಾದ ಕಾರಣ ಹೊಸದೇನು ಆಗಿರಲಿಲ್ಲ. ಆದರೆ ನನಗೆ ಈಗ ತಿಳಿಯಿತು. ಇಸ್ಲಾಂ ಮತ್ತು ಕ್ರೈಸ್ತರ ಪ್ರಭು ಒಬ್ಬನೇ ಎಂದು. ನನಗೆ ತುಂಬಾ ಮುಖ್ಯವಾದ ಮಾತೇನಾಗಿತ್ತೆಂದರೆ, ನಮಗೆ ಶಾಂತಿಯನ್ನು ಸ್ಥಾಪಿಸಲು ಕೂಡಿ ಪ್ರಯತ್ನ ಮಾಡಬೇಕಾಗಿದೆ.

Choristopher stark ಸಹಿಬ್ ಸ್ಥಳೀಯ head of Department ನ ಪೋಲೀಸರು 2011 ರಲ್ಲಿ Nidda ನಲ್ಲಿ ಮಸೀದಿಯ ಉದ್ಘಾಟನಾ ಸಮಾರಂಬದಲ್ಲಿ ಭಾಗವಹಿಸಿದದರು. ಹೇಳುತ್ತಾರೆ. ನನಗೆ ಮತ್ತೊಮ್ಮೆ ಆಹ್ವಾನ ನೀಡಿದರೆ ತುಂಬಾ ಸಂತೋಷವಾಯಿತು. ಖಲೀಫರ ಭಾಷಣವು ಸಮಯಕ್ಕೆ ತಕ್ಕುದಾಗಿತ್ತು. ಖಲೀಫರು ತಮ್ಮ ಭಾಷಣದಲ್ಲಿ ಹಿಂದಿನ ಭಾಷಣಗಾರರ ಮಾತುಗಳನ್ನು ಪ್ರಸ್ತಾಪಿಸಿದ ವಿಷಯು ಬಹಳ ಮೆಚ್ಚುಗೆಯಾಯಿತು. ನೆರೆಯವರ ಹಕ್ಕಿನ ಬಗ್ಗೆ ಪ್ರಸ್ತಾಪಿಸಿದ ವಿಷಯ ನಾನು ಅವಶ್ಯವಾಗಿ ನೆನಪಿಸುವೆನು, ಅದು ತುಂಬ ಅಗತ್ಯವಾಗಿದೆ, ಹೀಗೆ ಸಹೋದರತೆ ಬೆಳೆಸುವ ಪ್ರಯತ್ನ ಮಾಡಬೇಕಾಗಿದೆ. ಖಲಿಫರು ಹೇಳಿದ ಮಾತು ಇಲ್ಲಿ ಪೇಟೆಯಲ್ಲಿ ಲೌಕಿಕ ವಸ್ತುಗಳು ಖರೀದಿಸುವ ಜೊತೆಯಲ್ಲಿ ಈಗ ಆಧ್ಯಾತ್ಮಿಕ ಆಹಾರವು ಮಸೀದಿಯಿಂದಾಗಿ ಸೇವಿಸಬಹುದು. ಇದು ಅತ್ಯಂತ ಸುಂದರವದ ಮತ್ತು ಅವಶ್ಯಕವಾದ ಮಾತಾಗಿದೆ.

ಇನ್ನೋರ್ವ ಅತಿಥಿ Kristen Mayfield ಸಾಹಿಬ ಅವರು ನಿವೃತ್ತ banker ಆಗಿದ್ದಾರೆ, ತಮ್ಮ ಭಾವನೆಗಳನ್ನು ವ್ಯಕ್ತಪಡಿಸುತ್ತ ಹೇಳಿದರು. ಖಲೀಫರ ಭಾಷಣ ತುಂಬಾ ಒಳ್ಳೆಯದಾಗಿತ್ತು ಮತ್ತು ಸುಲಭವಾಗಿ

*(ಪುಟ ಸಂಖ್ಯೆ-10ರಲ್ಲಿ ಮುಂದುವರಿಸಲಾಗಿದೆ)*

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE : 1800-103-2131**
**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**
**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.